

Volume : 9 | Issue : 186 | October : 11 : 2026 : Sunday
ಸಂಪುಟ : 9 | ಸಂಚಿಕೆ : 186 | ಅಕ್ಟೋಬರ್ : 11 : 2026 : ಭಾನುವಾರ

www.VIKRAMAVAHINI.com
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

# ವಿಕ್ರಮ ವಾಹಿನಿ

ಪುಟ 4 ₹2 || ಕನ್ನಡ ದಿನಪತ್ರಿಕೆ || VIKRAMA VAHINI
PRGI NO: KARKAN/2018/78481



ನಟ ನಾನಾ ಪಾಟೇಕರ್ ಅವರ ನಿಧನದ ಹಿನ್ನೆಲೆಯಲ್ಲಿ 'ಕೌನ್ ಹೋನಾರ್ ಕರೋಡ್‌ಪತಿ' ಮರಾಠಿ ಕಾರ್ಯಕ್ರಮದ ಮೊದಲ ಸಂಚಿಕೆಯಲ್ಲಿ ಅವರ ಬದಲಿಗೆ ನಟ ಸೋನಾಲಿ ಬೇಂದ್ರೆ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮಾಧುರಿ ದೀಕ್ಷಿತ್ ನಿರೂಪಣೆಯ ಈ ಕಾರ್ಯಕ್ರಮ ಅ. 12ರಿಂದ ಪ್ರಸಾರವಾಗಲಿದೆ.

ಔಷಧಗಳ ಲಾಭಾಂಶಕ್ಕೆ ಕಡಿವಾಣ: ಜನರಿಗೆ ರೂ 2,500 ಕೋಟಿ ಉಳಿತಾಯ ಪುಟ 3

ಪ್ರಭು ಶ್ರೀರಾಮ ನಾಮದ ಮಹಿಮೆ ಪುಟ 2

## ■ ಸುದ್ದಿ ಚುಟುಕು

### ಚಿಕಿತ್ಸೆಗಾಗಿ ಹಣವಿಲ್ಲದೆ ಮಗಳನ್ನು ಕೆರೆಗೆ ಎಸೆದ ತಾಯಿ!

● ವಿಕ್ರಮ ವಾಹಿನಿ । ಹೈದರಾಬಾದ್

ಅನಾರೋಗ್ಯದಿಂದ ಬಳಲುತ್ತಿದ್ದ ಆರು ವರ್ಷದ ಮಗಳ ಚಿಕಿತ್ಸೆಗೆ ಹಣವಿಲ್ಲದ ಆರ್ಥಿಕ ಸಂಕಷ್ಟದಿಂದ ತಾಯಿಯೇ ಬಾಲಕಿಯನ್ನು ಕೆರೆಗೆ ಎಸೆದಿರುವ ಆಘಾತಕಾರಿ ಘಟನೆ ಹೈದರಾಬಾದ್‌ನ ಹುಸೇನ್ ಸಾಗರ್ ಕೆರೆ ಬಳಿ ನಡೆದಿದೆ. ಘಟನೆಯನ್ನು ಗಮನಿಸಿದ ಆಟೋ ಚಾಲಕರೊಬ್ಬರು ತಕ್ಷಣ ಕಾರ್ಯಪ್ರವೃತ್ತರಾಗಿ ಹಗ್ಗದ ಸಹಾಯದಿಂದ ಬಾಲಕಿಯನ್ನು ರಕ್ಷಿಸಿದ್ದಾರೆ.

ದೋಮಲ್ಗೂಡ ಪೊಲೀಸರು ನೀಡಿದ ಮಾಹಿತಿ ಪ್ರಕಾರ, ಬಾಲಕಿಯ ತಾಯಿ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಅಪ್ಪರ್ ಟ್ಯಾಂಕ್‌ಬಂಡ್ ಪ್ರದೇಶಕ್ಕೆ ಕರೆತಂದಿದ್ದಳು. ಈ ವೇಳೆ ಕಿರಿಯ ಮಗಳನ್ನು ಕೆರೆಗೆ ಎಸೆದು ಸ್ಥಳದಿಂದ ತೆರಳಿದ್ದಾಳೆ ಎಂದು ಆರೋಪಿಸಲಾಗಿದೆ.

ಬಾಲಕಿ ಕೆರೆಗೆ ಬಿದ್ದಿರುವುದನ್ನು ಗಮನಿಸಿದ ಆಟೋ ಚಾಲಕ ತಕ್ಷಣ ಹಗ್ಗದ ಸಹಾಯದಿಂದ ಆಕೆಯನ್ನು ಹೊರತೆಗೆದಿದ್ದಾರೆ. ನೀರು ನುಂಗಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬಾಲಕಿಯನ್ನು ತಮ್ಮ ಆಟೋದಲ್ಲೇ ಗಾಂಧಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಚಿಕಿತ್ಸೆ ಬಳಿಕ ಬಾಲಕಿ ಪ್ರಜ್ಞೆ ಮರಳಿ ಪಡೆದಿದ್ದು, ಸದ್ಯ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದುಬಂದಿದೆ.

ಪ್ರಜ್ಞೆ ಮರಳಿದ ಬಳಿಕ ಬಾಲಕಿ ಪೊಲೀಸರಿಗೆ ತನ್ನ ಕುಟುಂಬದ ಬಗ್ಗೆ ಮಾಹಿತಿ ನೀಡಿದ್ದಾಳೆ. ಆಕೆ ಓಲ್ಡ್ ಬೋವೆನ್‌ಪಲ್ಲಿಯ ಹಸ್ಮತ್‌ಪೇಟೆ ಪ್ರದೇಶದ ನಿವಾಸಿಯಾಗಿದ್ದು, ಶ್ವಾಸಕೋಶದ ಸಮಸ್ಯೆಯಿಂದ ಬಳಲುತ್ತಿದ್ದಳು ಎನ್ನಲಾಗಿದೆ. ಇತ್ತೀಚೆಗೆ ಆಕೆಗೆ ಶಸ್ತ್ರಚಿಕಿತ್ಸೆಯೂ ನಡೆದಿತ್ತು. ಬಾಲಕಿಯ ತಂದೆ ಮೃತಪಟ್ಟಿದ್ದು, ಆಕೆಗೆ ಒಬ್ಬ ಅಕ್ಕ ಇದ್ದಾಳೆ ಎಂದು ತಿಳಿದುಬಂದಿದೆ.

ಮಗಳ ಅನಾರೋಗ್ಯ ಮತ್ತು ಕುಟುಂಬದ ಆರ್ಥಿಕ ಸಂಕಷ್ಟದಿಂದಾಗಿ ತಾಯಿ ಈ ಕೃತ್ಯಕ್ಕೆ ಮುಂದಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಆದರೆ, ಘಟನೆಯ ಹಿಂದಿನ ನಿಖರ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

### ವಿಮಾನದಲ್ಲೇ ಸಿಜೆಪಿ ನಾಯಕರಿಗೆ ಪ್ರಯಾಣಿಕರ ತರಾಟೆ



● ವಿಕ್ರಮ ವಾಹಿನಿ । ನವದೆಹಲಿ

ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ತೆರಳುತ್ತಿದ್ದ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪಕ್ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಈ ವೇಳೆ ವಿಮಾನದೊಳಗೆ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆದಿದೆ.

'ನಿಮಗೆ ನಾಚಿಕೆಯಾಗಬೇಕು' ಎಂದು ಪ್ರಯಾಣಿಕರು ಕೂಗುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅಭಿಜೀತ್ ದೀಪಕ್ ತಮ್ಮ ಸಹಚರರಾದ ಸೌರವ್ ದಾಸ್ ಮತ್ತು ಅಶುತೋಷ್ ರಂಕಾ ಅವರೊಂದಿಗೆ ಮುಂಬೈನಿಂದ ದೆಹಲಿಗೆ ಆಗಮಿಸಿದ್ದರು. ಬೆಳಿಗ್ಗೆ ಸುಮಾರು 10.18ಕ್ಕೆ ವಿಮಾನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದ ಬಳಿಕ, ದೆಹಲಿ ಪೊಲೀಸರ ತಂಡ ವಿಮಾನದೊಳಗೆ ಪ್ರವೇಶಿಸಿ ನಾಯಕರನ್ನು ವಶಕ್ಕೆ ಪಡೆಯಲು ಮುಂದಾಯಿತು ಎಂದು ವರದಿಯಾಗಿದೆ.

ಈ ವೇಳೆ ಅಭಿಜೀತ್ ದೀಪಕ್ ಮತ್ತು ಪೊಲೀಸ್ ಅಧಿಕಾರಿಗಳ ನಡುವೆ ವಾಗ್ವಾದ ನಡೆದಿದೆ ಎನ್ನಲಾಗಿದೆ. ತಮ್ಮನ್ನು ವಶಕ್ಕೆ ಪಡೆಯಲು ಮಹಿಳಾ ಪೊಲೀಸ್ ಅಧಿಕಾರಿಗಳು ಬಂದಿದ್ದಕ್ಕೆ ದೀಪಕ್ ಆಕ್ಷೇಪ ವ್ಯಕ್ತಪಡಿಸಿದರೆಂದು ವರದಿಗಳು ತಿಳಿಸಿವೆ. ಈ ಬೆಳವಣಿಗೆಯಿಂದ ವಿಮಾನದೊಳಗೆ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಸಿಜೆಪಿ ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗೆ ಕರೆ ನೀಡಿತ್ತು. ಆದರೆ, ಪ್ರತಿಭಟನೆಗೆ ಅನುಮತಿ ನಿರಾಕರಿಸಿದ ಹಿನ್ನೆಲೆಯಲ್ಲಿ ಪ್ರತಿಭಟನೆಗೂ ಮುನ್ನವೇ ಪಕ್ಷದ ನಾಯಕರನ್ನು ವಶಕ್ಕೆ ಪಡೆಯಲಾಗಿದೆ ಎಂದು ವರದಿಯಾಗಿದೆ.

# ಜಿರಳೆ ಕಾಟಕ್ಕೆ ದಿಲ್ಲಿ ಸ್ತಬ್ಧ





**ಎಸ್‌ಐಆರ್ ಅಕ್ರಮ ಆರೋಪದಡಿ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ನಡೆದ ಪ್ರತಿಭಟನೆ ತೀವ್ರ ಸ್ವರೂಪ ಪಡೆದಿದ್ದು, 7,000ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘರ್ಷಣೆ, ಕಲ್ಲುತೂರಾಟದ ಆರೋಪಗಳ ನಡುವೆ ರಾಜಧಾನಿಯಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.**

## ಸಾವಿರಾರು ಮಂದಿ ವಶಕ್ಕೆ

● ವಿಕ್ರಮ ವಾಹಿನಿ । ನವದೆಹಲಿ

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನಡೆಸಿದ ಪ್ರತಿಭಟನೆ ವೇಳೆ 7,000ಕ್ಕೂ ಹೆಚ್ಚು ಮಂದಿಯನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆದ ಆರೋಪದ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಿಸುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ, ಸೌರಭ್ ದಾಸ್ ಮತ್ತು ಅಶುತೋಷ್ ರಂಕಾ ಸೇರಿದಂತೆ ಪಕ್ಷದ ಪ್ರಮುಖ ನಾಯಕರನ್ನು ಮುಂಬೈನಿಂದ ದೆಹಲಿಗೆ ಬಂದಿಳಿದ ವಿಮಾನದೊಳಗೇ ಪೊಲೀಸರು ವಶಕ್ಕೆ ಪಡೆದಿದ್ದರು. ಬಂಧನವನ್ನು ಖಂಡಿಸಿದ ದೀಪ್ಕೆ, ವಿಮಾನದೊಳಗಿಂದಲೇ ವಿಡಿಯೊ ಸಂದೇಶ ಬಿಡುಗಡೆ ಮಾಡಿ ಪೊಲೀಸರ ಕ್ರಮವನ್ನು ಟೀಕಿಸಿದರು. ಪ್ರತಿಭಟನೆಯ ನೇತೃತ್ವವನ್ನು ಆಪ್ತ ಅಜಿಂಕ್ಯ ಶಿಂಧೆಗೆ ವಹಿಸಿದರು. 2ನೇ ಪುಟಕ್ಕೆ...

## ಎಸ್‌ಐಆರ್‌ಗೆ 124 ನಿವೃತ್ತ ಅಧಿಕಾರಿಗಳ ಬೆಂಬಲ

● ವಿಕ್ರಮ ವಾಹಿನಿ । ನವದೆಹಲಿ

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಭಾರತೀಯ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಸಮರ್ಥಿಸಿ, ಐಎಎಸ್ ಮತ್ತು ಐಎಫ್‌ಎಸ್ ಸೇರಿದಂತೆ ವಿವಿಧ ಸೇವೆಗಳ 124 ನಿವೃತ್ತ ಅಧಿಕಾರಿಗಳು ಬಹಿರಂಗ ಪತ್ರ ಬಿಡುಗಡೆ ಮಾಡಿದ್ದಾರೆ. ಚುನಾವಣಾ ಅಕ್ರಮ ಹಾಗೂ ಮತಗಳ ಕಳ್ಳತನದ ಆರೋಪಗಳಿಗೆ ವಿಶ್ವಾಸಾರ್ಹ ಸಾಕ್ಷ್ಯಗಳಿರಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ಚುನಾವಣಾ ಅಕ್ರಮಗಳು ಹೇಗೆ ನಡೆಯುತ್ತಿದ್ದವು ಎಂಬುದನ್ನು ತಮ್ಮ ಸೇವಾವಧಿಯಲ್ಲಿ ಕಂಡಿದ್ದೇವೆ. ಮತಗಟ್ಟೆ ವಶಪಡಿಸಿಕೊಳ್ಳುವುದು, ಮತಪೆಟ್ಟಿಗೆಗಳನ್ನು ಕದಿಯುವುದು ಮತ್ತು ಮತದಾರರನ್ನು ಮತದಾನದಿಂದ ತಡೆಯುವಂತಹ ಘಟನೆಗಳು ಹಿಂದೆ ಸಾಮಾನ್ಯವಾಗಿದ್ದವು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆದರೆ, ಇಂದಿನ ಚುನಾವಣಾ ವ್ಯವಸ್ಥೆಯಲ್ಲಿ ಅಭ್ಯರ್ಥಿಗಳ ಏಜೆಂಟರ ಉಪಸ್ಥಿತಿ, ಇವಿಎಂಗಳಿಗೆ ಸೀಲ್ ಹಾಕುವುದು, ಭದ್ರತಾ ಕೊಠಡಿಗಳ ಮೇಲ್ವಿಚಾರಣೆ ಹಾಗೂ ವಿವಿಪ್ಯಾಟ್ ಚೀಟಿಗಳ ಪರಿಶೀಲನೆಯಂತಹ ಸುರಕ್ಷತಾ ಕ್ರಮಗಳಿವೆ ಎಂದು ತಿಳಿಸಿದ್ದಾರೆ.

ಬಿಹಾರದಲ್ಲಿ 2025ರ ವಿಧಾನಸಭಾ ಚುನಾವಣೆ ವೇಳೆ ಮರುಮತದಾನದ ಅಗತ್ಯ ಉಂಟಾಗದಿರುವುದು ಮತ್ತು ಹೆಚ್ಚಿನ ಮತದಾನ ದಾಖಲಾಗಿರುವುದನ್ನು ಚುನಾವಣಾ ವ್ಯವಸ್ಥೆಯ ಸುಧಾರಣೆಗೆ ಉದಾಹರಣೆಯಾಗಿ ನೀಡಿದ್ದಾರೆ. ಚುನಾವಣಾ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎನ್ನುವ ಆರೋಪಗಳನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸಬೇಕು. ಆಧಾರರಹಿತ ಆರೋಪಗಳು ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲಿನ ಜನರ ನಂಬಿಕೆಯನ್ನು ಕುಗ್ಗಿಸುತ್ತವೆ ಎಂದು ಎಚ್ಚರಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸುತ್ತಿರುವ ಸಂದರ್ಭದಲ್ಲೇ ಈ ಪತ್ರ ಬಿಡುಗಡೆಯಾಗಿದೆ. ದೆಹಲಿಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮುಂದಾಗಿದ್ದ ಹಲವು ವಿರೋಧ ಪಕ್ಷಗಳ ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

## ಬಂಧಿತರ ಬಿಡುಗಡೆಗೆ ವಾಂಗ್‌ಚುಕ್ 24 ಗಂಟೆ ಗಡುವು

● ವಿಕ್ರಮ ವಾಹಿನಿ । ನವದೆಹಲಿ

ದೆಹಲಿಯಲ್ಲಿ ಬಂಧನಕ್ಕೊಳಗಾಗಿರುವ ವಿರೋಧ ಪಕ್ಷದ ನಾಯಕರು, ವಿದ್ಯಾರ್ಥಿ ಸಂಘಟನೆಗಳ ಮುಖಂಡರು, ವಕೀಲರು ಹಾಗೂ ಪತ್ರಕರ್ತರನ್ನು ಮುಂದಿನ 24 ಗಂಟೆಗಳೊಳಗೆ ಬಿಡುಗಡೆ ಮಾಡದಿದ್ದರೆ ತಾವೂ ಶಾಂತಿಯುತ ಪ್ರತಿಭಟನೆ ನಡೆಸುವ ಬಗ್ಗೆ ಚಿಂತಿಸುವುದಾಗಿ ಹವಾಮಾನ ಹೋರಾಟಗಾರ ಸೋನಮ್ ವಾಂಗ್‌ಚುಕ್ ಎಚ್ಚರಿಸಿದ್ದಾರೆ.



ಶನಿವಾರ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡ ವಿಡಿಯೊ ಸಂದೇಶದಲ್ಲಿ ಮಾತನಾಡಿದ ಅವರು, ಬಂಧನಗಳನ್ನು ತೀವ್ರವಾಗಿ ಖಂಡಿಸಿದರು. ಪ್ರತಿಭಟನೆ ವೇಳೆ ಶಾಂತಿ ಮತ್ತು ಒಗ್ಗಟ್ಟು ಕಾಪಾಡುವಂತೆ ತಾವು ಮನವಿ ಮಾಡಿದ್ದರೂ, ಶಾಂತಿಯುತ ಪ್ರತಿಭಟನೆಗೆ ಅವಕಾಶ ನೀಡದಿರುವುದು ಆಘಾತ ತಂದಿದೆ. ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇರುವಂತೆ ಕಾಣುತ್ತಿದೆ ಎಂದು ಟೀಕಿಸಿದರು.

ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ವಿರೋಧ ಪಕ್ಷಗಳ ನಾಯಕರು ಪ್ರತಿಭಟನೆಗೆ ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಭದ್ರತೆ ಹೆಚ್ಚಿಸಲಾಗಿದ್ದು, ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ವರದಿಯಾಗಿದೆ.

ಮಾಜಿ ಮುಖ್ಯಮಂತ್ರಿಗಳಾದ ಅರವಿಂದ್ ಕೇಜ್ರಿವಾಲ್, ಮಮತಾ ಬ್ಯಾನರ್ಜಿ, ಪಿಣರಾಯಿ ವಿಜಯನ್ ಮತ್ತು ಮಾಣಿಕ್ ಸರ್ಕಾರ್ ಸೇರಿದಂತೆ ಹಲವು ವಿರೋಧ ಪಕ್ಷಗಳ ನಾಯಕರು ವಶಕ್ಕೆ ಪಡೆದವರಲ್ಲಿ ಸೇರಿದ್ದಾರೆ ಎಂದು ವರದಿಯಾಗಿದೆ. ಬಂಧನಗಳನ್ನು ಹಿಂಪಡೆದು ಸಮಸ್ಯೆಗಳನ್ನು ಶಾಂತಿಯುತವಾಗಿ ಪರಿಹರಿಸಬೇಕು ಎಂದು ವಾಂಗ್‌ಚುಕ್ ಆಗ್ರಹಿಸಿದ್ದಾರೆ.

## 'ಯುವಕರನ್ನು ದೆಹಲಿಗೆ ತಲುಪದಂತೆ ತಡೆಯಲು ಸಾಧ್ಯವಿಲ್ಲ'

● ವಿಕ್ರಮ ವಾಹಿನಿ । ಪಾಟ್ನಾ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ದೆಹಲಿಯಲ್ಲಿ ನಡೆಸಲು ಉದ್ದೇಶಿಸಿರುವ ಪ್ರತಿಭಟನೆಯ ಹಿನ್ನೆಲೆಯಲ್ಲಿ ಹಲವು ರೈಲುಗಳನ್ನು ರದ್ದುಗೊಳಿಸಿರುವ ನಿರ್ಧಾರಕ್ಕೆ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಭಾರತದ ಯುವಕರು ದೆಹಲಿಗೆ ತಲುಪುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.



ಶುಕ್ರವಾರ ಹರಿಯಾಣದ ಸೋನಿಪತ್‌ನ ಕುಂಡ್ಲಿಯಲ್ಲಿ ಮಾತನಾಡಿದ ಅವರು, 'ಎಷ್ಟು ರೈಲುಗಳನ್ನು ನಿಲ್ಲಿಸುತ್ತೀರಿ? ಎಷ್ಟು ಸಂಪರ್ಕ ಮಾರ್ಗಗಳನ್ನು ಅಡ್ಡಿಪಡಿಸುತ್ತೀರಿ? ಎಷ್ಟು ರಸ್ತೆಗಳನ್ನು ನಿರ್ಬಂಧಿಸುತ್ತೀರಿ?' ಎಂದು ಪ್ರಶ್ನಿಸಿದರು. ಬಿಹಾರ ಮತ್ತು ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಿಂದ ದೆಹಲಿಗೆ ಸಂಚರಿಸುವ ರೈಲುಗಳನ್ನು ರದ್ದುಗೊಳಿಸಿರುವ ಕ್ರಮದ ಕುರಿತು ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಇದಕ್ಕೂ ಮೊದಲು, ಚುನಾವಣಾ ಪ್ರಕ್ರಿಯೆ ಕುರಿತು ಕಳವಳ ಹೊಂದಿರುವ ರಾಜಕೀಯ ಪಕ್ಷಗಳು ನಿರಂತರ ಪ್ರತಿಭಟನೆ ನಡೆಸುವ ಬದಲು ಚುನಾವಣಾ ಆಯೋಗದೊಂದಿಗೆ ಮಾತುಕತೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಪಾಸ್ವಾನ್ ಹೇಳಿದ್ದರು.

**ಸಂವಾದದ ಮೂಲಕ ಪರಿಹಾರಕ್ಕೆ ಸಲಹೆ**

ಶಾಂತಿಯುತ ಪ್ರತಿಭಟನೆ ನಡೆಸುವುದು ಪ್ರಜಾಸತ್ತಾತ್ಮಕ ಹಕ್ಕು ಎಂದು ಒಪ್ಪಿಕೊಂಡ ಅವರು, ಚುನಾವಣಾ ಆಯೋಗವು ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿರುವುದರಿಂದ ಅದನ್ನು ಸಂಪರ್ಕಿಸಿ, ನಿಯೋಗದ ಮೂಲಕ ಸಮಸ್ಯೆಗಳನ್ನು ಪ್ರಸ್ತಾಪಿಸಬಹುದು ಎಂದರು. ಪತ್ರ ಬರೆಯುವುದು, ಸಭೆಗೆ ಸಮಯ ಕೇಳುವುದು ಹಾಗೂ ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆಯುವುದು ಸಾಧ್ಯವಿದೆ ಎಂದು ತಿಳಿಸಿದರು.

ಪ್ರತಿಭಟನೆಗಳಿಂದ ಸಾಮಾನ್ಯ ಜನರಿಗೆ ತೊಂದರೆಯಾಗಬಾರದು ಎಂದು ಹೇಳಿದ ಅವರು, ವಿರೋಧ ಪಕ್ಷಗಳು ನಿಜವಾಗಿಯೂ ಸಮಸ್ಯೆಗೆ ಪರಿಹಾರ ಬಯಸುತ್ತಿವೆಯೇ ಅಥವಾ ರಾಜಕೀಯ ಗದ್ದಲ ಸೃಷ್ಟಿಸಲು ಮುಂದಾಗಿವೆಯೇ ಎಂಬುದನ್ನು ಪ್ರಶ್ನಿಸಿದರು.

## ಮೋದಿ ಸರ್ಕಾರ ಪತನದ ಬಳಿಕ ಪ್ರಜಾಪ್ರಭುತ್ವದ ದುರಸ್ತಿ: ರಾಹುಲ್

● ವಿಕ್ರಮ ವಾಹಿನಿ । ನವದೆಹಲಿ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರದಿಂದ ನಿರ್ಗಮಿಸಿದ ಬಳಿಕ ಪ್ರಜಾಪ್ರಭುತ್ವದ ದುರಸ್ತಿ ಕಾರ್ಯ ಆರಂಭವಾಗಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ದೆಹಲಿಯಲ್ಲಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಮುಂದಾಗಿದ್ದ ಕಾಕ್ರೋಚ್ ಜನತಾ ಪಾರ್ಟಿ ನಾಯಕರನ್ನು ಪೊಲೀಸರು ವಶಕ್ಕೆ ಪಡೆದ ಬೆನ್ನಲ್ಲೇ, ಶನಿವಾರ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ರಾಹುಲ್ ಗಾಂಧಿ ಈ ಹೇಳಿಕೆ ನೀಡಿದ್ದಾರೆ. 'ಜ್ಞಾನೇಶ್ ಕುಮಾರ್ ಹೋಗುತ್ತಾರೆ. ಈ ಸರ್ಕಾರವೂ ಹೋಗುತ್ತದೆ. ನಂತರ ಪ್ರಜಾಪ್ರಭುತ್ವದ ದುರಸ್ತಿ ಪ್ರಾರಂಭವಾಗುತ್ತದೆ' ಎಂದು ಅವರು ಹಿಂದಿಯಲ್ಲಿ ಪೋಸ್ಟ್ ಮಾಡಿದ್ದಾರೆ.

ಚುನಾವಣಾ ಆಯೋಗದ ಮುಖ್ಯಸ್ಥರಿಗಿಂತಲೂ ಆಳವಾದ ಸಮಸ್ಯೆಯಿದ್ದು, ಪ್ರಸ್ತುತ ಸರ್ಕಾರ ಬದಲಾಗಬೇಕಿದೆ ಎಂದು ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದರು. ವಿರೋಧ ಪಕ್ಷಗಳ ಪ್ರತಿಭಟನೆಗಳು ಸರ್ಕಾರದ ಅಡಿಪಾಯವನ್ನು ಅಲುಗಾಡಿಸಿದ್ದು, ಸರ್ಕಾರ ಭಯಭೀತವಾಗಿದೆ ಎಂದು ಇಂಡಿಯಾ ಮೈತ್ರಿಕೂಟದ ಸಂಸದರನ್ನುದ್ದೇಶಿಸಿ ಅವರು ಮಾತನಾಡಿದ್ದರು.

# ಗುರುಮಠಗಳ ಸೇವೆ ಸ್ತುತ್ಯಾರ್ಹ: ಡಿ.ಕೆ. ಶಿವಕುಮಾರ್

## ■ ನಮ್ಮ ಧರ್ಮ ಸಮಾಜವನ್ನು ಒಗ್ಗೂಡಿಸುವುದೇ ಹೊರತು ವಿಭಜಿಸುವುದಲ್ಲ ■

● ವಿಕ್ರಮ ವಾಹಿನಿ । ಬೆಂಗಳೂರು

ಗುರುಗಳು ಹಾಗೂ ಗುರುಮಠಗಳು ಸಮಾಜಕ್ಕೆ ನೀಡುತ್ತಿರುವ ಅಕ್ಷರ, ಅನ್ನ ಮತ್ತು ಧರ್ಮದಾಸೋಹದ ಸೇವೆ ಸ್ತುತ್ಯಾರ್ಹವಾಗಿದೆ. ಗುರುಗಳ ಮಾರ್ಗದರ್ಶನವಿಲ್ಲದೆ ಸಮಾಜ ಮುನ್ನಡೆಯಲು ಸಾಧ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗದಗ ಜಿಲ್ಲೆಯ ಶಿರಹಟ್ಟಿಯ ಭಾವೈಕ್ಯತಾ ಫಕೀರೇಶ್ವರ ಮಠದ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ 25ಕ್ಕೂ ಹೆಚ್ಚು ಮಠಗಳ ಸ್ವಾಮೀಜಿಗಳ ನಿಯೋಗವು ಶನಿವಾರ ಗೃಹ ಕಚೇರಿ ಕೃಷ್ಣಾದಲ್ಲಿ ಅವರನ್ನು ಭೇಟಿ ಮಾಡಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜವನ್ನು ಒಗ್ಗೂಡಿಸುವುದೇ ಧರ್ಮದ ಉದ್ದೇಶವಾಗಬೇಕು ಎಂದರು.

**ಒಗ್ಗಟ್ಟಿನಲ್ಲಿ ಶಕ್ತಿ ಇದೆ:** ವೀರಶೈವ ಮತ್ತು ಲಿಂಗಾಯತ ಸಮುದಾಯಗಳನ್ನು ಪ್ರತ್ಯೇಕಿಸುವ ಪ್ರಯತ್ನ ನಡೆದಾಗ ಸಮುದಾಯದ ಗುರುಗಳ ಕ್ಷಮೆ ಕೇಳಿದ್ದೆ. ನಾವು ಸೂಜಿಯಂತೆ ಹೊಲಿಯುವ ಕೆಲಸ ಮಾಡಬೇಕೇ ಹೊರತು ಕತ್ತರಿಯಂತೆ ಕತ್ತರಿಸುವ ಕೆಲಸ ಮಾಡಬಾರದು. ಸಮಾಜದಲ್ಲಿ ಒಗ್ಗಟ್ಟು ಮೂಡಿಸುವುದೇ ನಮ್ಮ ಉದ್ದೇಶ ಎಂದು ತಿಳಿಸಿದರು.



ಗದಗ ಜಿಲ್ಲೆ ಶಿರಹಟ್ಟಿಯ ಭಾವೈಕ್ಯತಾ ಫಕೀರೇಶ್ವರ ಮಠದ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದ 25 ಕ್ಕೂ ಹೆಚ್ಚು ಮಠಗಳ ಸ್ವಾಮೀಜಿಗಳ ನಿಯೋಗವು ಸಿಎಂ ಡಿ ಕೆ ಶಿವಕುಮಾರ್ ಅವರನ್ನು ಗೃಹಕಚೇರಿ ಕೃಷ್ಣಾದಲ್ಲಿ ಶನಿವಾರ ಭೇಟಿ ಮಾಡಿ ಆಶೀರ್ವಾದ ಮಾಡಿತು.

ಸಿದ್ದಗಂಗಾ ಶ್ರೀಗಳಿಗೆ ಚೆನ್ನೈನ ಆಸ್ಪತ್ರೆಯಲ್ಲಿ ಮುಸ್ಲಿಂ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ ಸಂದರ್ಭದಲ್ಲಿ ಮಾನವೀಯತೆಯೇ ಮುಖ್ಯ, ಎಲ್ಲರೂ ಒಂದೇ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕೆ ಟೀಕೆಗಳು ಬಂದಿದ್ದವು. ಆದರೆ ತಾವು ಅದಕ್ಕೆ ತಲೆಕೆಡಿಸಿಕೊಳ್ಳಲಿಲ್ಲ ಎಂದರು.

**ದಸರಾ ಉದ್ಘಾಟನೆ ಬಗ್ಗೆ ಸುಳ್ಳುಸುದ್ದಿ:** ಮೈಸೂರು ದಸರಾ ಉದ್ಘಾಟನೆಗೆ ಕೊಪ್ಪಳದ ಗವಿಮಠದ ಶ್ರೀಗಳು ಒಪ್ಪಿಲ್ಲ ಎಂಬ ಸುಳ್ಳುಸುದ್ದಿ ಹರಡಲಾಗಿತ್ತು. ಶ್ರೀಗಳೊಂದಿಗೆ ಚರ್ಚಿಸಿಯೇ ಅವರ ಹೆಸರನ್ನು ಅಂತಿಮಗೊಳಿಸಲಾಗಿತ್ತು.

ಅವರ ವ್ಯಕ್ತಿತ್ವ ಮತ್ತು ಮಠದ ಸೇವೆಯನ್ನು ರಾಜ್ಯದ ಜನರು ಗೌರವಿಸುತ್ತಾರೆ. ಆದರೆ ಕೆಲವರು ಈ ವಿಚಾರದಲ್ಲೂ ರಾಜಕೀಯ ಮಾಡಲು ಪ್ರಯತ್ನಿಸಿದರು ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ತಮಗೆ ದೊರೆತಿರುವ ಅವಕಾಶದಲ್ಲಿ ಜನರ ಹೃದಯ ಗೆದ್ದು ಕೆಲಸ ಮಾಡುವುದು ತಮ್ಮ ಗುರಿಯಾಗಿದೆ. ಮಠಾಧೀಶರು ನೀಡಿರುವ ಆಶೀರ್ವಾದ ತಮಗೆ ಮಾತ್ರವಲ್ಲ, ಇಡೀ ಸರ್ಕಾರಕ್ಕೂ ಸಲ್ಲುತ್ತದೆ. ಮುಂದೆಯೂ ಮಠಗಳ ಸಹಕಾರ ಇರಲಿ ಎಂದು ಅವರು ಮನವಿ ಮಾಡಿದರು.

www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481
ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

### ಸವಿ ವಾಹಿನಿ

ನಿಮ್ಮ ಧೈಯದಲ್ಲ ಯಶಸ್ವಿಯಾಗಲು, ನೀವು ನಿಮ್ಮ ಗುರಿಯ ಬಗ್ಗೆ ಏಕ ಮನಸ್ಸಿನ ಭಕ್ತಿ ಹೊಂದಿರಬೇಕು.

### ದಿನ ಪಂಚಾಂಗ

ಅಕ್ಟೋಬರ್, 11–2026, ಭಾನುವಾರ ಶರದ್ ಋತು,
ಆಶ್ವಯುಜ ಮಾಸ, ಶುದ್ಧ ಪಕ್ಷ
ಪಾಡ್ಯ ತಿಥಿ ರಾ.8:22
ಚಿತ್ತ ನಕ್ಷತ್ರ ರಾ.10:34
ರಾಹುಕಾಲ ಸಾ 4:33–6:03
ಜಯಲಕ್ಷ್ಮಿ ವ್ರತ, ಚಾಮುಂಡೇಶ್ವರೀ ದಸರಾ ಉತ್ಸವ, ಧರ್ಮಸ್ಥಳ ನವರಾತ್ರಾರಂಭ, ಕಾನಂಗಿ ಶ್ರೀನಿವಾಸ ಧ್ವಜ, ಜ್ಞಾನೇಶ್ವರ ಜಯಂತಿ, ಮುಕ್ತಾಬಾಯಿ ಜಯಂತಿ, ಬೆಟಗೇರಿ ಕುರಹಟ್ಟಿಪೇಟೆ ತುಳಜಾಭವಾನಿ ದೇವಸ್ಥಾನ ಘಟಸ್ಥಾಪನೆ, ಸಿರಿಗೆರೆ ಶಿವಕುಮಾರಸ್ವಾಮಿ ನಿಜೈಕ್ಯ ದಿನ, ರಂಭಾಪುರಿ ಶ್ರೀಶೈಲ ದಸರಾ ದರ್ಬಾರ ಆರಂಭ

### ಆಧ್ಯಾತ್ಮ

## ರಾಘವೇಶ್ವರ ಶ್ರೀಗಳ ಸಾನ್ನಿಧ್ಯದಲ್ಲಿ ಇಂದಿನಿಂದ 'ನವರಾತ್ರ ನಮಸ್ಯಾ'



● ವಿಕ್ರಮ ವಾಹಿನಿ । ಬೆಂಗಳೂರು

ನಗರದ ಗಿರಿನಗರದ ಶ್ರೀರಾಮಚಂದ್ರಾಪುರ ಮಠದ ಶಾಖೆಯಲ್ಲಿ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಅ.11ರಿಂದ 11 ದಿನಗಳ ಕಾಲ 'ನವರಾತ್ರ ನಮಸ್ಯಾ' ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ನವರಾತ್ರಿ ಅಂಗವಾಗಿ ರಾಜರಾಜೇಶ್ವರಿ ದೇವಿಯ ಆರಾಧನೆ, ವಿಶೇಷ ಪೂಜೆ, ಹವನ ಹಾಗೂ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಒಂಬತ್ತು ದಿನಗಳ ಕಾಲ ಉಪವಾಸ ವ್ರತ ಆಚರಿಸಲಿರುವ ಶ್ರೀಗಳು ರಾಜರಾಜೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಪ್ರತಿದಿನ ಮಧ್ಯಾಹ್ನ 3 ಗಂಟೆಗೆ ಶ್ರೀಗಳಿಂದ ಲಲಿತೋಪಾಖ್ಯಾನ ಪ್ರವಚನ ನಡೆಯಲಿದೆ. ಶ್ರೀದುರ್ಗಾ ಮಂಟಪದಲ್ಲಿ ಮಣ್ಣಿನ ಮೂರ್ತಿಯನ್ನು ಪ್ರತಿಷ್ಠಾಪಿಸಿ ರಾಜರಾಜೇಶ್ವರಿ ಮಹಾಪೂಜೆ ನೆರವೇರಿಸಲಾಗುತ್ತದೆ.

**1108 ಸಪ್ತಶತೀ ಪಾರಾಯಣ:** ಉತ್ಸವದ 11 ದಿನಗಳಲ್ಲಿ ಸುಮಾರು 50 ಸಾವಿರ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. 1108 ಸಪ್ತಶತೀ ಪಾರಾಯಣ, ಒಂಬತ್ತು ದಿನಗಳಲ್ಲಿ ಒಂಬತ್ತು ವಿಶೇಷ ಹವನಗಳು ಹಾಗೂ ಪ್ರತಿದಿನ ನೂರಾರು ಮಹಿಳೆಯರಿಂದ ಕುಂಕುಮಾರ್ಚನೆ ನಡೆಯಲಿವೆ. ವಿಜಯದಶಮಿಯಂದು ಶತಚಂಡಿಕಾ ಮಹಾಯಾಗ ಸಂಪನ್ನಗೊಳ್ಳಲಿದೆ.

ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ 500 ಋತ್ವಿಜರು ಭಾಗವಹಿಸಲಿದ್ದು, 50ಕ್ಕೂ ಹೆಚ್ಚು ಖ್ಯಾತ ಕಲಾವಿದರು ಕಲಾಸೇವೆ ಸಲ್ಲಿಸಲಿದ್ದಾರೆ. 50 ಭಜನಾ ತಂಡಗಳು ಪಾಲ್ಗೊಳ್ಳಲಿವೆ. ಕಾರ್ಯಕ್ರಮದ ಆರಂಭದಲ್ಲಿ 108 ಮಹಿಳೆಯರು ಶ್ರೀಗಳಿಗೆ ಪೂರ್ಣಕುಂಭ ಸ್ವಾಗತ ನೀಡಲಿದ್ದಾರೆ.

11 ದಿನಗಳ ಉತ್ಸವದ ಸಿದ್ಧತೆಗಳು ಭರದಿಂದ ಸಾಗಿದ್ದು, 500ಕ್ಕೂ ಹೆಚ್ಚು ಕಾರ್ಯಕರ್ತರು ವ್ಯವಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನವರಾತ್ರಿಯ ಪರ್ವಕಾಲದಲ್ಲಿ ನಡೆಯುವ ರಾಜರಾಜೇಶ್ವರಿ ಆರಾಧನೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗುವಂತೆ ನವರಾತ್ರ ನಮಸ್ಯಾ ಸಮಿತಿ ಮನವಿ ಮಾಡಿದೆ.

# ಪ್ರಭು ಶ್ರೀರಾಮ ನಾಮದ ಮಹಿಮೆ

ಹನುಮಂತನು ಸೀತಾಮಾತೆಯನ್ನು ಹುಡುಕುವ ಸಂಕಲ್ಪದಿಂದ ನೂರು ಯೋಜನಗಳಷ್ಟು ವಿಸ್ತಾರವಾದ ಮಹಾಸಾಗರವನ್ನು ಲಂಘಿಸಿ ಲಂಕಾಪುರಿಯನ್ನು ಸೇರಿದನು. ಅಶೋಕವನದಲ್ಲಿ ಬಂಧಿತಳಾಗಿದ್ದ ಸೀತೆಯನ್ನು ಕಂಡು, ಶ್ರೀರಾಮನ ಗುರುತಿನ ಉಂಗುರವನ್ನು ನೀಡಿ ಅವರ ಸಂದೇಶವನ್ನು ತಲುಪಿಸಿದನು. ಸೀತೆಗೆ ಧೈರ್ಯ ತುಂಬಿ, ರಾವಣನ ಪುತ್ರ ಅಕ್ಷಯಕುಮಾರನನ್ನು ಸಂಹರಿಸಿ, ಲಂಕೆಯನ್ನು ತನ್ನ ಜ್ವಲಂತ ಬಾಲದಿಂದ ದಹಿಸಿ ಮತ್ತೆ ಸಾಗರ ದಾಟಿ ಹಿಂದಿರುಗಿದನು. ಸೀತೆಯ ಸುಖವಾರ್ತೆಯನ್ನು ಕೇಳಿದ ಶ್ರೀರಾಮನ ಹೃದಯ ಆನಂದದಿಂದ ತುಂಬಿತು.

ನಂತರ ಶ್ರೀರಾಮನು ಸುಗ್ರೀವ, ಹನುಮಂತ ಹಾಗೂ ಅಪಾರ ವಾನರಸೈನ್ಯದೊಂದಿಗೆ ಇಂದಿನ ರಾಮೇಶ್ವರದ ಸಮೀಪದ ಧನುಷ್ಕೋಟಿಯ ಸಮುದ್ರತೀರವನ್ನು ಸೇರಿದನು. ಎದುರಿಗೆ ಅಪಾರ ಸಾಗರ. ಅದನ್ನು ದಾಟಿ ಲಂಕೆಯನ್ನು ಸೇರುವುದು ಹೇಗೆ ಎಂಬ ಚಿಂತೆ ರಾಮನನ್ನು ಕಾಡಿತು.

ಸಮುದ್ರರಾಜನಿಗೆ ಮೂರು ದಿನಗಳ ಕಾಲ ಪ್ರಾರ್ಥಿಸಿದರೂ ಯಾವುದೇ ಪ್ರತಿಕ್ರಿಯೆ ದೊರೆಯಲಿಲ್ಲ. ಅಂತಿಮವಾಗಿ ಕೋಪಗೊಂಡ ರಾಮನು ತನ್ನ ಬಾಣಗಳಿಂದ ಸಮುದ್ರವನ್ನು ಒಣಗಿಸುವ ಸಂಕಲ್ಪ ಮಾಡಿದಾಗ, ಭಯಗೊಂಡ ಸಮುದ್ರರಾಜನು ಪ್ರತ್ಯಕ್ಷನಾದನು.

"ಪ್ರಭು, ನಿಮ್ಮ ವಾನರಸೈನ್ಯದಲ್ಲಿರುವ ವಿಶ್ವಕರ್ಮನ ಪುತ್ರ ನೀಲನು ಸೇತುವೆ ನಿರ್ಮಾಣದಲ್ಲಿ ಅಪಾರ ನಿಪುಣನು. ಅವನಿಂದ ಸೇತುವೆ ನಿರ್ಮಿಸಿರಿ; ಅದನ್ನು ನಾನು ಧರಿಸುತ್ತೇನೆ," ಎಂದು ಹೇಳಿ ಸಮುದ್ರರಾಜನು ಅಂತರ್ಧಾನನಾದನು.



ನೀಲನ ನೇತೃತ್ವದಲ್ಲಿ ಲಕ್ಷಾಂತರ ವಾನರರು ಕಾಡಿನಿಂದ ಬೃಹತ್ ಮರಗಳು, ಶಿಲೆಗಳು, ಪರ್ವತಗಳನ್ನೇ ಹೊತ್ತು ತಂದು ಸಮುದ್ರದಲ್ಲಿ ಜೋಡಿಸಿದರು. ಹೀಗೆ ಐದು ದಿನಗಳ ಪರಿಶ್ರಮದಿಂದ ಮಹಾಸೇತುವೆ ನಿರ್ಮಾಣವಾಯಿತು.

**ರಾಮಸೇತು ನಿರ್ಮಾಣ:** ವಾಲ್ಮೀಕಿ ರಾಮಾಯಣದ ಯುದ್ಧಕಾಂಡದ ಪ್ರಕಾರ, ಮೊದಲ ದಿನ 14 ಯೋಜನ, ಎರಡನೇ ದಿನ 20 ಯೋಜನ, ಮೂರನೇ ದಿನ 21 ಯೋಜನ, ನಾಲ್ಕನೇ ದಿನ 22 ಯೋಜನ ಹಾಗೂ ಐದನೇ ದಿನ 23 ಯೋಜನ ಉದ್ದದ ಸೇತುವೆ ನಿರ್ಮಾಣವಾಯಿತು.

ಒಟ್ಟು ನೂರು ಯೋಜನಗಳ ಸೇತುವೆ ಪೂರ್ಣಗೊಂಡ ಬಳಿಕ ಶ್ರೀರಾಮ, ಲಕ್ಷ್ಮಣ ಹಾಗೂ ವಾನರಸೇನೆ ಲಂಕೆಯನ್ನು ತಲುಪಿ, ರಾವಣನನ್ನು ಸಂಹರಿಸಿ ಸೀತಾಮಾತೆಯನ್ನು ಕರೆತಂದರು.

**ರಾಮಸೇತು–ಇಂದಿಗೂ ಕುತೂಹಲದ ವಿಷಯ:** ಭಕ್ತರ ಪಾಲಿಗೆ ಅದು ಶ್ರೀರಾಮಸೇತು, ಇತಿಹಾಸಕಾರರಿಗೆ ಮತ್ತು ಭೂವಿಜ್ಞಾನಿಗಳಿಗೆ ಅದು ಅಧ್ಯಯನದ ವಿಷಯ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಅದು ಭಕ್ತಿ, ಧರ್ಮ, ತ್ಯಾಗ ಮತ್ತು ಅಚಲ ನಂಬಿಕೆಯ ಶಾಶ್ವತ ಸಂಕೇತವಾಗಿದೆ.

"ರಾಮನಿಗಿಂತ ರಾಮನಾಮ ದೊಡ್ಡದು" ಎಂಬ ಜನಪ್ರಿಯ ನುಡಿ, ಭಕ್ತಿಯ ಶಕ್ತಿಯನ್ನು ಸಾರುವ ಈ ಕಥೆಗಳ ಮೂಲಕ ಇಂದಿಗೂ ಕೋಟ್ಯಂತರ ಜನರ ಹೃದಯದಲ್ಲಿ ಜೀವಂತವಾಗಿದೆ.

## ಅಳಿಲಿನ ಸೇವೆ

ಈ ಮಹಾಕಾರ್ಯದಲ್ಲಿ ಪುಟ್ಟ ಅಳಿಲೂ ತನ್ನ ಪಾಲಿನ ಸೇವೆಯನ್ನು ಮರೆಯಲಿಲ್ಲ. ದೊಡ್ಡ ಬಂಡೆಗಳನ್ನು ಹೊರುವ ಶಕ್ತಿ ಇಲ್ಲದಿದ್ದರೂ, ತನ್ನ ಮೈಯನ್ನು ನೀರಿನಲ್ಲಿ ಒದ್ದೆ ಮಾಡಿಕೊಂಡು ಮರಳಿನಲ್ಲಿ ಹೊರಳಾಡಿ, ಆ ಮರಳನ್ನು ಸೇತುವೆ ನಿರ್ಮಾಣದ ಸ್ಥಳದಲ್ಲಿ ಉದುರಿಸುತ್ತಿತ್ತು.

ಆ ಪುಟ್ಟ ಜೀವಿಯ ನಿಸ್ವಾರ್ಥ ಸೇವೆಯನ್ನು ಕಂಡ ಶ್ರೀರಾಮನ ಕಣ್ಣುಗಳಲ್ಲಿ ಪ್ರೀತಿಯ ಕಣ್ಣೀರು ತುಂಬಿತು. ಅವರು ಅಳಿಲಿನ ಬೆನ್ನನ್ನು ಮೃದುವಾಗಿ ಸವರಿದರೆಂದು ಜನಪ್ರಿಯ ಕಥೆ ಹೇಳುತ್ತದೆ. ಅಂದಿನಿಂದ ಅಳಿಲಿನ ಬೆನ್ನಿನ ಮೇಲಿರುವ ಮೂರು ಗೆರೆಗಳು ಶ್ರೀರಾಮನ ಬೆರಳಿನ ಗುರುತುಗಳೆಂದು ಭಕ್ತರು ನಂಬುತ್ತಾರೆ.



**ಈ ಕಥೆಯ ಸಂದೇಶ ಸ್ಪಷ್ಟ– ಮಹತ್ತರ ಕಾರ್ಯಗಳಲ್ಲಿ ಸಣ್ಣ ಸೇವೆಯೂ ಅಮೂಲ್ಯ.**

## ಶ್ರೀರಾಮ ನಾಮದ ಮಹಿಮೆ

ಜನಪ್ರಿಯ ಭಕ್ತಿಕಥೆಯೊಂದರ ಪ್ರಕಾರ, ವಾನರರು ಸಮುದ್ರಕ್ಕೆ ಎಸೆಯುವ ಬಂಡೆಗಳು ಮುಳುಗುತ್ತಿದ್ದವು. ಆಗ ಪ್ರತಿಯೊಂದು ಬಂಡೆಯ ಮೇಲೂ "ಶ್ರೀರಾಮ" ಎಂದು ಬರೆದು ನೀರಿಗೆ ಹಾಕಿದಾಗ ಅವು ತೇಲತೊಡಗಿದವು ಎಂದು ಹೇಳಲಾಗುತ್ತದೆ.

ಇದನ್ನು ಕಂಡ ಶ್ರೀರಾಮನಿಗೂ ಆಶ್ಚರ್ಯವಾಯಿತು. "ನನ್ನ ಹೆಸರನ್ನು ಬರೆದ ಕಲ್ಲುಗಳು ಹೇಗೆ ತೇಲುತ್ತವೆ?" ಎಂಬ ಕುತೂಹಲ ಮೂಡಿತು.

ಆ ರಾತ್ರಿ ಎಲ್ಲರೂ ವಿಶ್ರಾಂತಿಗೆ ಹೋದ ನಂತರ, ರಾಮನು ಒಬ್ಬನೇ ಸಮುದ್ರತೀರಕ್ಕೆ ತೆರಳಿ ಒಂದು ಬಂಡೆಯ ಮೇಲೆ "ಶ್ರೀರಾಮ" ಎಂದು ಬರೆದು ನೀರಿಗೆ ಬಿಟ್ಟನು. ಆದರೆ ಆ ಬಂಡೆ ತಕ್ಷಣವೇ ಮುಳುಗಿತು.

ಅಷ್ಟರಲ್ಲಿ ಅಲ್ಲಿದ್ದ ಹನುಮಂತನು ಮಂದಹಾಸ ಮಾಡಿದನು.

ಸಂಕೋಚದಿಂದ ನಿಂತ ರಾಮನಿಗೆ ಹನುಮಂತನು ಹೇಳಿದನು: "ಪ್ರಭು, ಇದರಲ್ಲಿ ಆಶ್ಚರ್ಯವೇನೂ ಇಲ್ಲ. ನಾವು ನಿಮ್ಮ ಭಕ್ತರು. ನಿಮ್ಮ ನಾಮದ ಮೇಲೆ ಅಚಲವಾದ ಭಕ್ತಿ ಮತ್ತು ಸಂಪೂರ್ಣ ನಂಬಿಕೆ ಇಟ್ಟು ಬಂಡೆಗಳನ್ನು ಸಮುದ್ರಕ್ಕೆ ಹಾಕಿದ್ದೇವೆ. ಆ ಭಕ್ತಿಯೇ ಕಲ್ಲುಗಳನ್ನು ತೇಲಿಸಿತು. ಆದರೆ ನಿಮಗೆ ನಿಮ್ಮ ಮೇಲಿನ ಭಕ್ತಿ ಇರಲು ಸಾಧ್ಯವಿಲ್ಲ; ನಿಮಗಿದ್ದದ್ದು ಕೇವಲ ಕುತೂಹಲ. ಆದ್ದರಿಂದ ಆ ಕಲ್ಲು ಮುಳುಗಿತು."

ಈ ಕಥೆಯ ಸಾರಾಂಶ ಒಂದೇ–ಭಕ್ತಿಯಿಂದ ಉಚ್ಚರಿಸಿದ ದೇವರ ನಾಮದಲ್ಲಿ ಅಪಾರ ಆತ್ಮಿಕ ಶಕ್ತಿ ಅಡಗಿದೆ.

# ಬಾಲಿ ನೃತ್ಯ ವೈಭವಕ್ಕೆ ಯಕ್ಷಗಾನದ ಸಾಥ್

**ಬಾಲಿಯ ಕೆಚಕ್ ನೃತ್ಯ, ಗ್ಯಾಮೆಲನ್ ಸಂಗೀತ ಹಾಗೂ ಕರಾವಳಿಯ ಯಕ್ಷಗಾನದ ಅಪರೂಪದ ಸಂಗಮದ ಮೂಲಕ 'ಬಾಲಿ ಇನ್ ಬೆಂಗಳೂರು' ಉತ್ಸವ ಭಾರತ–ಇಂಡೋನೇಷ್ಯಾ ಸಾಂಸ್ಕೃತಿಕ ಬಾಂಧವ್ಯಕ್ಕೆ ಹೊಸ ಮೆರುಗು ನೀಡಿತು.**

● ವಿಕ್ರಮ ವಾಹಿನಿ । ಬೆಂಗಳೂರು

ನಗರದಾದ್ಯಂತ ನಡೆಯುತ್ತಿರುವ 16 ದಿನಗಳ ಸಾಂಸ್ಕೃತಿಕ ಉತ್ಸವ 'ಬಾಲಿ ಇನ್ ಬೆಂಗಳೂರು' ಅಂಗವಾಗಿ ಅ.9ರಂದು ಮೀನಾಕ್ಷಿ ರಂಗಮಂಚದಲ್ಲಿ ಇಂಡೋನೇಷ್ಯಾದ ಸಾಂಪ್ರದಾಯಿಕ ನೃತ್ಯ ಮತ್ತು ಸಂಗೀತದ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪರಮ್ ಫೌಂಡೇಷನ್ ಆಯೋಜನೆಯ ಈ ಕಲಾ ಸಂಜೆ ಬಾಲಿ ಮತ್ತು ಕರ್ನಾಟಕದ ಸಾಂಪ್ರದಾಯಿಕ ಕಲಾಪರಂಪರೆಗಳ ಅಪರೂಪದ ಸಂಗಮಕ್ಕೆ ವೇದಿಕೆಯಾಯಿತು.

ಕಾರ್ಯಕ್ರಮದಲ್ಲಿ ಬಾಲಿಯ ಪ್ರಸಿದ್ಧ ಕೆಚಕ್ ನೃತ್ಯ, ಸಾಂಪ್ರದಾಯಿಕ ನೃತ್ಯ ಪ್ರಕಾರಗಳು ಹಾಗೂ ಗ್ಯಾಮೆಲನ್ ವಾದ್ಯಮೇಳದ ಪ್ರದರ್ಶನ ಗಮನ ಸೆಳೆಯಿತು. ಕರಾವಳಿಯ ಯಕ್ಷಗಾನದೊಂದಿಗೆ ಬಾಲಿ ಕಲಾಪ್ರಕಾರಗಳ ಸಹಯೋಗದ ಪ್ರದರ್ಶನವು ಉಭಯ ಸಂಸ್ಕೃತಿಗಳ ವೈವಿಧ್ಯತೆ ಮತ್ತು ಸಾಮ್ಯತೆಯನ್ನು ಅನಾವರಣಗೊಳಿಸಿತು.

ಕಲಾ ವಿನಿಮಯಕ್ಕೆ ವೇದಿಕೆ

ಈ ಕಾರ್ಯಕ್ರಮ ಕೇವಲ ವಿಭಿನ್ನ ಕಲಾಪ್ರಕಾರಗಳ ಸಮ್ಮಿಶ್ರ ಪ್ರದರ್ಶನವಾಗಿರದೆ,



ಅವುಗಳ ಮೂಲ ಸ್ವರೂಪ, ಕಥನಶೈಲಿ ಮತ್ತು ಹಾವಭಾವಗಳನ್ನು ಗೌರವಿಸುವ ಸಾಂಸ್ಕೃತಿಕ ವಿನಿಮಯಕ್ಕೆ ಸಾಕ್ಷಿಯಾಯಿತು. ಭಾರತ ಮತ್ತು ಇಂಡೋನೇಷ್ಯಾ ನಡುವಿನ ಐತಿಹಾಸಿಕ ಸಾಂಸ್ಕೃತಿಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವುದರ ಜತೆಗೆ, ಕಲಾವಿದರು ಮತ್ತು ಕಲಾಪ್ರೇಮಿಗಳ ನಡುವೆ ಸಂವಾದಕ್ಕೂ ಅವಕಾಶ ಕಲ್ಪಿಸಿತು.

ಅ.18ರವರೆಗೆ ನಡೆಯಲಿರುವ ಉತ್ಸವದಲ್ಲಿ ತೊಗಲುಗೊಂಬೆಯಾಟ, ಕಾರ್ಯಾಗಾರಗಳು ಹಾಗೂ ವಿವಿಧ ಕಲಾ ಪ್ರಾತ್ಯಕ್ಷಿಕೆಗಳು ನಡೆಯಲಿವೆ. ವಿದೇಶಿ ಕಲಾಪರಂಪರೆಗಳನ್ನು ಸ್ಥಳೀಯ ಕಲೆಯೊಂದಿಗೆ ಪರಿಚಯಿಸುವ ಮೂಲಕ ನಗರದ ಸಾಂಸ್ಕೃತಿಕ ವಲಯಕ್ಕೆ ಹೊಸ ಆಯಾಮ ನೀಡುವುದು ಉತ್ಸವದ ಉದ್ದೇಶವಾಗಿದೆ.

# ಸಾವಿರಾರು ಮಂದಿ ವಶಕ್ಕೆ

1ನೇ ಪುಟದಿಂದ

ಹಲವು ಕಡೆ ಪ್ರತಿಭಟನೆ, ಪೊಲೀಸರೊಂದಿಗೆ ಸಂಘರ್ಷ

ನಾಯಕರ ಬಂಧನದ ನಡುವೆಯೂ ಅಜಿಂಕ್ಯ ಶಿಂಧೆ ಪ್ರತಿಭಟನೆ ಮುಂದುವರಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು. ಪೊಲೀಸರು ತಡೆದ ಸ್ಥಳವನ್ನೇ ಪ್ರತಿಭಟನಾ ಸ್ಥಳವೆಂದು ಪರಿಗಣಿಸಿ ಹೋರಾಟ ಮುಂದುವರಿಸುವಂತೆ ಮನವಿ ಮಾಡಿದರು.

ಸೆಂಟ್ರಲ್ ದೆಹಲಿಯಲ್ಲಿ ಎಸ್ಎಫ್ಐ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಕೆಡವಿ ಪೊಲೀಸರೊಂದಿಗೆ ಘರ್ಷಣೆಗೆ ಇಳಿದಿದ್ದಾರೆ ಎಂದು ವರದಿಯಾಗಿದೆ. ಆಕಾಶವಾಣಿ ಭವನ ಮತ್ತು ಕನ್ನಾಟ್ ಪ್ಲೇಸ್ ಸುತ್ತಮುತ್ತ ಕಲ್ಲುತೂರಾಟ ನಡೆದಿದ್ದು, ಕೆಲ ಪೊಲೀಸರಿಗೆ ಗಾಯಗಳಾಗಿವೆ ಎನ್ನಲಾಗಿದೆ. ಐಸಾ ಮತ್ತು ಎಡಪಕ್ಷಗಳ ಕಾರ್ಯಕರ್ತರು ಬಿಜೆಪಿ ಪ್ರಧಾನ ಕಚೇರಿ ಎದುರೂ ಪ್ರತಿಭಟನೆ ನಡೆಸಿದರು.

ಸುಪ್ರೀಂ ಕೋರ್ಟ್ ಆವರಣದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಸುಮಾರು 60 ವಕೀಲರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಮಧ್ಯಪ್ರವೇಶದ ಬಳಿಕ ಬಿಡುಗಡೆ ಮಾಡಲಾಗಿದೆ ಎಂದು ವರದಿಯಾಗಿದೆ.

**ರಾಜಧಾನಿಯಲ್ಲಿ ಬಿಗಿ ಭದ್ರತೆ:** ಪ್ರತಿಭಟನೆಯ ಹಿನ್ನೆಲೆಯಲ್ಲಿ ದೆಹಲಿಯಾದ್ಯಂತ ಭದ್ರತೆ ಹೆಚ್ಚಿಸಲಾಗಿತ್ತು. ಕೇಂದ್ರ ದೆಹಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ 600ಕ್ಕೂ ಹೆಚ್ಚು ಅಪರಾಧ ಹಿನ್ನೆಲೆಯುಳ್ಳವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. 250ಕ್ಕೂ ಹೆಚ್ಚು ರೈಲುಗಳ ಸಂಚಾರ ರದ್ದುಗೊಳಿಸಲಾಗಿದ್ದು, 50ಕ್ಕೂ ಹೆಚ್ಚು ಮೆಟ್ರೊ ನಿಲ್ದಾಣಗಳನ್ನು ಮುಚ್ಚಲಾಗಿತ್ತು ಎಂದು ವರದಿಯಾಗಿದೆ. ಪ್ರತಿಭಟನೆ ಮತ್ತು ಸಂಚಾರ ನಿರ್ಬಂಧಗಳಿಂದ ಕೇಂದ್ರ ದೆಹಲಿಯ ಹಲವು ರಸ್ತೆಗಳಲ್ಲಿ ಭಾರಿ ವಾಹನ ದಟ್ಟಣೆ ಉಂಟಾಯಿತು.

# ಬರ ಪರಿಣಾಮದಿಂದ ತುಮಕೂರಿನಲ್ಲಿ 'ಸರಳ ದಸರಾ'

● ವಿಕ್ರಮ ವಾಹಿನಿ । ತುಮಕೂರು

ರಾಜ್ಯದಲ್ಲಿನ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಬಾರಿ ತುಮಕೂರು ದಸರಾ ಉತ್ಸವವನ್ನು ಸರಳವಾಗಿ ಆಚರಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ತಿಳಿಸಿದರು. ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದ ತುಮಕೂರು ದಸರಾವನ್ನು ಯಶಸ್ವಿಯಾಗಿ ಆಯೋಜಿಸಿಕೊಂಡು ಬರಲಾಗುತ್ತಿದೆ. ಸಾಹಿತ್ಯ, ಕಲೆ, ಕ್ರೀಡೆ ಹಾಗೂ ರಂಗಭೂಮಿಯಲ್ಲಿ ವಿಶೇಷ ಸಾಧನೆ ಮಾಡಿರುವ ತುಮಕೂರಿನ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಉತ್ಸವದ ಉದ್ದೇಶವಾಗಿದೆ ಎಂದರು.

ದಸರಾವನ್ನು ಈ ವರ್ಷವೂ ಆಚರಿಸಬೇಕೇ ಎಂಬ ಚರ್ಚೆ ನಡೆದಿತ್ತು. ಆದರೆ, ಬರದ ನಡುವೆಯೂ ಉತ್ಸವ ನಡೆಸುವಂತೆ ಜನರು ಒತ್ತಾಯಿಸಿದ್ದಾರೆ. ಹೀಗಾಗಿ, ಹೆಚ್ಚು ಹಣ ವೆಚ್ಚ ಮಾಡದೆ, ಲಭ್ಯವಿರುವ ಸಂಪನ್ಮೂಲಗಳ ಮಿತಿಯಲ್ಲಿ ಉತ್ಸವ ನಡೆಸಲಾಗುತ್ತಿದೆ. ಇದು ಸರ್ಕಾರದ ಕಾರ್ಯಕ್ರಮವಾಗದೆ ಜನರ ಹಬ್ಬವಾಗಬೇಕು. ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳು ಹಾಗೂ ಜಿಲ್ಲಾಡಳಿತದ ಸಹಕಾರದೊಂದಿಗೆ ಉತ್ಸವ ಆಯೋಜಿಸಲಾಗಿದೆ ಎಂದು ಹೇಳಿದರು.



ಉತ್ಸವಕ್ಕೆ ನಾಳೆ ಬೆಳಿಗ್ಗೆ 8.30ಕ್ಕೆ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಚಾಲನೆ ದೊರೆಯಲಿದೆ. ಸಿದ್ಧಗಂಗಾ ಮಠದ ಶ್ರೀಗಳು, ಸಿದ್ದಬೆಟ್ಟದ ಶ್ರೀಗಳು, ಹನುಮಂತನಾಥ ಸ್ವಾಮೀಜಿ, ಖಾರದ ಮಠದ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ದಸರಾ ಧ್ವಜ ಹಾಗೂ ನಾಡಧ್ವಜಾರೋಹಣದ ಮೂಲಕ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಲಾಗುವುದು. 11 ದಿನಗಳ ಕಾಲ ಹೋಮ, ಹವನ, ಚಾಮುಂಡೇಶ್ವರಿ ಹಾಗೂ ದುರ್ಗಾ ಪೂಜೆ ನಡೆಯಲಿದೆ ಎಂದು ತಿಳಿಸಿದರು.

ಯುವಜನರನ್ನು ಆಕರ್ಷಿಸುವ ಉದ್ದೇಶದಿಂದ ವಸ್ತುಪ್ರದರ್ಶನ ಮತ್ತು ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ. ನಗರದ ಟೌನ್‌ಹಾಲ್‌ನಲ್ಲಿ ಹೂವುಗಳಿಂದ ಇಂಡಿಯಾ ಗೇಟ್, ಹಂಪಿ ರಥ ಹಾಗೂ ಬೆಂಗಳೂರು ಮೆಟ್ರೊ ಸೇರಿದಂತೆ ಹಲವು ಆಕರ್ಷಕ ಕಲಾಕೃತಿಗಳನ್ನು ನಿರ್ಮಿಸಲಾಗುತ್ತಿದೆ.

**ನಗರದಲ್ಲಿ ದೀಪಾಲಂಕಾರ:** ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಪ್ರತಿದಿನ ಎರಡು ನಾಟಕಗಳನ್ನು ಪ್ರದರ್ಶಿಸಲಾಗುವುದು. ದಸರಾ ಹಿನ್ನೆಲೆಯಲ್ಲಿ ತುಮಕೂರು ನಗರದಾದ್ಯಂತ ವಿವಿಧ ಬಗೆಯ ದೀಪಾಲಂಕಾರ ಮಾಡಲಾಗಿದೆ. ನಗರದ ದೀಪಾಲಂಕಾರವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಉಚಿತವಾಗಿ ಎರಡು ಅಂಬಾರಿ ಬಸ್‌ಗಳ ಸಂಚಾರಕ್ಕೂ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಪರಮೇಶ್ವರ್ ವಿವರಿಸಿದರು.

# ಲಾಲ್‌ಬಾಗ್‌ನಲ್ಲಿ ಮಂಜಿನ ಉದ್ಯಾನವನ

● ವಿಕ್ರಮ ವಾಹಿನಿ । ಬೆಂಗಳೂರು

ಬೆಂಗಳೂರಿನ ಪ್ರಸಿದ್ಧ ಲಾಲ್‌ಬಾಗ್‌ಗೆ ಮತ್ತೊಂದು ಆಕರ್ಷಣೆ ಸೇರ್ಪಡೆಯಾಗುತ್ತಿದೆ. ತೋಟಗಾರಿಕೆ ಇಲಾಖೆ ಸಿಂಗಾಪುರದ ಮಂಜು ತೋಟದ ಮಾದರಿಯಲ್ಲಿ 2.5 ಎಕರೆ ಪ್ರದೇಶದಲ್ಲಿ ಮಂಜಿನ ಉದ್ಯಾನವನ ನಿರ್ಮಿಸುತ್ತಿದ್ದು, ಕಾಮಗಾರಿ ಭರದಿಂದ ಸಾಗಿದೆ.

ಸುಮಾರು 300 ಮಂಜು ಸಿಂಪಡಿಸುವ ಸಾಧನಗಳು, ನೈಸರ್ಗಿಕ ಬಂಡೆಗಳು, ಕಾಲುವೆಗಳು, ಸೇತುವೆಗಳು ಹಾಗೂ ವಿವಿಧ ಸಸ್ಯಗಳು ಉದ್ಯಾನವನದ ವಿಶೇಷ ಆಕರ್ಷಣೆಯಾಗಲಿವೆ. ಥೈಲ್ಯಾಂಡ್, ಚೀನಾ ಸೇರಿದಂತೆ ವಿವಿಧ ಭಾಗಗಳಿಂದ ತರಲಾದ ಸುಮಾರು 200 ಬಗೆಯ ವರ್ಣರಂಜಿತ ಸಸ್ಯಗಳನ್ನು ಇಲ್ಲಿ ಬೆಳೆಸಲಾಗುತ್ತಿದೆ.

ಉದ್ಯಾನವನ ಸಾರ್ವಜನಿಕರಿಗೆ ಹೊಸ ಅನುಭವ ನೀಡುವ ನಿರೀಕ್ಷೆಯಿದ್ದು, ಲಾಲ್‌ಬಾಗ್‌ನ ಪ್ರವಾಸಿ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಲಿದೆ.

# ಕಾಡುಹಂದಿಗಳ ಅಕ್ರಮ ಸಾಗಾಟ ಜಾಲ ಪತ್ತೆ: ಮೂವರ ಬಂಧನ

**ಮಹಾರಾಷ್ಟ್ರದ ಗಡಿ ಭಾಗದಿಂದ ವಿಜಯಪುರ ಮಾರ್ಗವಾಗಿ ಕಾಡುಹಂದಿಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಜಾಲವನ್ನು ಅರಣ್ಯ ಇಲಾಖೆ ಭೇದಿಸಿದೆ. ತಿಡಗುಂದಿ ಬಳಿ ನಡೆಸಿದ ಕಾರ್ಯಾಚರಣೆಯಲ್ಲಿ 20 ಕಾಡುಹಂದಿಗಳನ್ನು ರಕ್ಷಿಸಿ, ಮೂವರನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಅಧಿಕಾರಿಗಳು ಸಾಗಾಟ ಜಾಲದ ಮೂಲದ ಕುರಿತು ತನಿಖೆ ಮುಂದುವರಿಸಿದ್ದಾರೆ.**

● ವಿಕ್ರಮ ವಾಹಿನಿ । ವಿಜಯಪುರ

ಮಹಾರಾಷ್ಟ್ರದ ಗಡಿ ಭಾಗದಿಂದ ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಗೋವಾಕ್ಕೆ ಕಾಡುಹಂದಿಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಜಾಲವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ. ಕಾರ್ಯಾಚರಣೆ ವೇಳೆ 20 ಕಾಡುಹಂದಿಗಳನ್ನು ರಕ್ಷಿಸಿ, ಮೂವರನ್ನು ವಶಕ್ಕೆ ಪಡೆಯಲಾಗಿದೆ.

ವಿಜಯಪುರ ವಲಯ ಅರಣ್ಯಾಧಿಕಾರಿ ಸಂತೋಷ ಆಜೂರ ನೇತೃತ್ವದ ತಂಡ ತಿಡಗುಂದಿ ಬಳಿಯ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಶುಕ್ರವಾರ ರಾತ್ರಿ ಕಾರ್ಯಾಚರಣೆ ನಡೆಸಿತು. ಈ ವೇಳೆ ಕೆಎ 25 ಎಸಿ 1773 ನೋಂದಣಿ ಸಂಖ್ಯೆಯ ಸರಕು ಸಾಗಣೆ ವಾಹನದಲ್ಲಿ ಕಾಡುಹಂದಿಗಳನ್ನು ಸಾಗಿಸುತ್ತಿರುವುದು ಪತ್ತೆಯಾಗಿದೆ. ಹಂದಿಗಳ ಕಾಲು ಮತ್ತು ಬಾಯಿಯನ್ನು ಕಟ್ಟಿ ಸಾಗಿಸಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ:** ವಾಹನದಲ್ಲಿದ್ದ ಧಾರವಾಡ ಮೂಲದ ಅಭಿಷೇಕ ಕೊರವರ, ನಾಗರಾಜ ಜಗದ ಹಾಗೂ ಶಂಕ್ರೆಪ್ಪ ದುಂಡಿಕೋರ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಮಹಾರಾಷ್ಟ್ರದ ಗಡಿ ಭಾಗದಲ್ಲಿ ಭೀಮಾನದಿ ತೀರದಲ್ಲಿ ಬಲೆ ಹಾಕಿ ಕಾಡುಹಂದಿಗಳನ್ನು ಸೆರೆಹಿಡಿದು, ವಿಜಯಪುರ ಮಾರ್ಗವಾಗಿ ಇತರ ಪ್ರದೇಶಗಳಿಗೆ ಸಾಗಿಸಲಾಗುತ್ತಿತ್ತು ಎಂಬ ಮಾಹಿತಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಕಾಲು ಮತ್ತು ಬಾಯಿ ಕಟ್ಟಿದ್ದರಿಂದ ಹಂದಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದವು. ನ್ಯಾಯಾಲಯದ ಅನುಮತಿ ಪಡೆದು ಅವುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಕಾಡುಹಂದಿಗಳ ಅಕ್ರಮ ಸೆರೆಹಿಡಿಯುವಿಕೆ ಮತ್ತು ಸಾಗಾಟಕ್ಕೆ ಸಂಬಂಧಿಸಿದಂತೆ ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

**ಸಾಗಾಟ ಜಾಲದ ಬಗ್ಗೆ ತನಿಖೆ**

ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕಾಡುಹಂದಿಗಳನ್ನು ಸೆರೆಹಿಡಿಯುತ್ತಿರುವವರು ಯಾರು, ಅವುಗಳನ್ನು ಎಲ್ಲಿ ಮಾರಾಟ ಮಾಡಲಾಗುತ್ತಿದೆ ಹಾಗೂ ಸಾಗಾಟ ಜಾಲದಲ್ಲಿ ಇನ್ನೂ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬುದರ ಕುರಿತು ಅರಣ್ಯ ಇಲಾಖೆ ತನಿಖೆ ಮುಂದುವರಿಸಿದೆ. ಗಡಿ ಭಾಗದಲ್ಲಿ ಅಕ್ರಮವಾಗಿ ವನ್ಯಜೀವಿಗಳನ್ನು ಸಾಗಿಸುತ್ತಿದ್ದ ಜಾಲವನ್ನು ಪತ್ತೆಹಚ್ಚಿದ ಅರಣ್ಯ ಇಲಾಖೆ ಕಾರ್ಯಾಚರಣೆಗೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

# ಸ್ಟಿಂಗ್ ಅಸ್ತ್ರ ಬಳಸಿ ಶಾಸಕರು, ಸಚಿವರಿಗೆ ಸಿಎಂ ಬ್ಲ್ಯಾಕ್‌ಮೇಲ್: ಛಲವಾದಿ ಆರೋಪ

● ವಿಕ್ರಮ ವಾಹಿನಿ । ಬೆಂಗಳೂರು

ಸ್ಟಿಂಗ್ ಆಪರೇಷನ್ ವಿಚಾರವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮದೇ ಪಕ್ಷದ ಶಾಸಕರು ಮತ್ತು ಸಚಿವರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್‌ನಲ್ಲಿ ತಪ್ಪು ಕಂಡುಬಂದಿದ್ದರೆ ಮುಖ್ಯಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕಿತ್ತು. ಭ್ರಷ್ಟಾಚಾರ ಮಾಡದವರಿಗೆ ಭಯವಿರುವುದಿಲ್ಲ. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ದಲಿತರ ಮೇಲಿನ ದೌರ್ಜನ್ಯ, ಕೊಲೆ ಮತ್ತು ಅತ್ಯಾಚಾರ ಪ್ರಕರಣಗಳತ್ತ ಗಮನಹರಿಸಬೇಕು. ರಾಜ್ಯದಲ್ಲಿ ದಲಿತರಿಗೆ ಅನ್ಯಾಯವಾಗುತ್ತಿದ್ದರೂ ಸರ್ಕಾರ ಗಂಭೀರವಾಗಿ ಸ್ಪಂದಿಸುತ್ತಿಲ್ಲ ಎಂದು ಟೀಕಿಸಿದರು.

ಫಾರಂ–7 ಮೂಲಕ ಮತದಾರರ ಹೆಸರುಗಳನ್ನು ಅಕ್ರಮವಾಗಿ ತೆಗೆದುಹಾಕಲಾಗುತ್ತಿದೆ ಎಂಬ ಆರೋಪವನ್ನು ತಳ್ಳಿಹಾಕಿದ ಅವರು, ಚುನಾವಣಾ ಆಯೋಗದ ವಿರುದ್ಧ ಆರೋಪ ಮಾಡುವವರು ನಿರ್ದಿಷ್ಟ ಲೋಪಗಳನ್ನು ಸಾಬೀತುಪಡಿಸಿ ನ್ಯಾಯಾಲಯದ ಮೊರೆ ಹೋಗಬೇಕು ಎಂದರು.

ಕೇಂದ್ರ ಸರ್ಕಾರದ ವಿರುದ್ಧದ ಪ್ರತಿಭಟನೆಗಳನ್ನು ಟೀಕಿಸಿದ ಅವರು, ಸಾಂವಿಧಾನಿಕ ಹುದ್ದೆಗಳಲ್ಲಿರುವವರ ರಾಜೀನಾಮೆಗೆ ಒತ್ತಾಯಿಸುವ ಮೊದಲು ಅವರ ತಪ್ಪುಗಳನ್ನು ಸಾಬೀತುಪಡಿಸಬೇಕು ಎಂದು ಹೇಳಿದರು. ಸಿದ್ದರಾಮಯ್ಯ ಅವರ ನಾಯಕತ್ವದಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಉಳಿದಿದೆ. ಅವರನ್ನು ಮೂಲೆಗುಂಪು ಮಾಡುತ್ತಿರುವುದರಿಂದ ರಾಜ್ಯದಲ್ಲೂ ಕಾಂಗ್ರೆಸ್ ಅಸ್ತಿತ್ವ ಕಳೆದುಕೊಳ್ಳಲಿದೆ ಎಂದು ಭವಿಷ್ಯ ನುಡಿದರು.

ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ನಾಯಕತ್ವ ದುರ್ಬಲವಾಗಿದೆ ಎಂದು ಟೀಕಿಸಿದ ಅವರು, ರಾಹುಲ್ ಗಾಂಧಿ ಅವರಿಂದ ಪಕ್ಷಕ್ಕೆ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ಕಾಂಗ್ರೆಸ್‌ಗೆ ಸಮರ್ಥ ನಾಯಕತ್ವದ ಕೊರತೆಯಿದ್ದು, ಮುಂದಿನ ದಿನಗಳಲ್ಲಿ ಪಕ್ಷದ ಅಸ್ತಿತ್ವವೇ ಪ್ರಶ್ನೆಯಾಗಲಿದೆ ಎಂದು ವ್ಯಂಗ್ಯವಾಡಿದರು.

# ಔಷಧಗಳ ಲಾಭಾಂಶಕ್ಕೆ ಕಡಿವಾಣ: ಜನರಿಗೆ ರೂ 2,500 ಕೋಟಿ ಉಳಿತಾಯ

● ವಿಕ್ರಮ ವಾಹಿನಿ | ಬೆಂಗಳೂರು

ಔಷಧಗಳ ಉತ್ಪಾದನಾ ವೆಚ್ಚ ಮತ್ತು ಮಾರಾಟ ದರದ ನಡುವಿನ ಲಾಭಾಂಶಕ್ಕೆ ಮಿತಿ ವಿಧಿಸುವುದರಿಂದ ದೇಶದ ಜನಸಾಮಾನ್ಯರಿಗೆ ಸುಮಾರು ರೂ 2,500 ಕೋಟಿ ಉಳಿತಾಯವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದರು.

ಆರೋಗ್ಯ ಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಯಾನ್ಸರ್, ಮೂತ್ರಪಿಂಡ ಹಾಗೂ ಹೃದ್ರೋಗ ಸೇರಿದಂತೆ ವಿವಿಧ ಕಾಯಿಲೆಗಳ ಚಿಕಿತ್ಸೆಗೆ ಬಳಸುವ ಔಷಧಗಳನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ದೂರುಗಳಿವೆ. ಔಷಧಗಳ ಬೆಲೆ ನಿಯಂತ್ರಣದ ಮೂಲಕ ರೋಗಿಗಳ ಮೇಲಿನ ಆರ್ಥಿಕ ಹೊರೆ ತಗ್ಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಉದಾಹರಣೆಗೆ, ರೂ 3,000 ಉತ್ಪಾದನಾ ವೆಚ್ಚದ ಔಷಧವನ್ನು ರೂ 27,000ಕ್ಕೆ ಮಾರಾಟ ಮಾಡಲಾಗುತ್ತಿದೆ. ಲಾಭಾಂಶಕ್ಕೆ ಶೇ.30ರ ಮಿತಿ ವಿಧಿಸಿದರೆ ಅದರ ಮಾರಾಟ ದರವನ್ನು ರೂ 4,280ಕ್ಕೆ ಇಳಿಸಬಹುದು. ಇದರಿಂದ ಗ್ರಾಹಕರಿಗೆ ಗಣನೀಯ ಉಳಿತಾಯವಾಗಲಿದೆ ಎಂದು ವಿವರಿಸಿದರು. ಈಗಾಗಲೇ 253 ಔಷಧಗಳ ಉತ್ಪಾದನಾ ವೆಚ್ಚ ಮತ್ತು ಮಾರಾಟ ದರದ ವಿವರಗಳನ್ನು ಅಧಿಕಾರಿಗಳು ಸಂಗ್ರಹಿಸಿದ್ದಾರೆ. ಮುಂದಿನ ಹಂತದಲ್ಲಿ ವೈದ್ಯಕೀಯ ಸಲಕರಣೆಗಳ ದರವನ್ನೂ ಪಟ್ಟಿ ಮಾಡಿ ಪ್ರಕಟಿಸಲಾಗುವುದು ಎಂದರು.

ಔಷಧಗಳ ಬೆಲೆ ನಿಯಂತ್ರಣದ ಜೊತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ವಿಧಿಸುವ ಚಿಕಿತ್ಸಾ ಶುಲ್ಕದಲ್ಲಿಯೂ ಪಾರದರ್ಶಕತೆ ತರಲು ಸರ್ಕಾರ ಉದ್ದೇಶಿಸಿದೆ. ವೈದ್ಯಕೀಯ ಪರೀಕ್ಷೆಗಳು, ಶಸ್ತ್ರಚಿಕಿತ್ಸೆ ಹಾಗೂ ಇತರ ಚಿಕಿತ್ಸೆಗಳ ದರಗಳನ್ನು ಸ್ಪಷ್ಟವಾಗಿ ಪ್ರಕಟಿಸುವ ವ್ಯವಸ್ಥೆ ಜಾರಿಗೊಳಿಸುವ ಕುರಿತು ಚರ್ಚೆ ನಡೆಯುತ್ತಿದೆ. ಇದರಿಂದ ರೋಗಿಗಳು ಚಿಕಿತ್ಸೆಗೆ ಮುನ್ನ ವೆಚ್ಚದ ಬಗ್ಗೆ ಮಾಹಿತಿ ಪಡೆಯಲು ಸಾಧ್ಯವಾಗಲಿದ್ದು, ಅನಗತ್ಯ ಶುಲ್ಕ ವಿಧಿಸುವುದನ್ನು ತಡೆಯಬಹುದು ಎಂಬ ನಿರೀಕ್ಷೆ ಇದೆ.

### ಚಿಕಿತ್ಸಾ ವೆಚ್ಚ ನಿಯಂತ್ರಣಕ್ಕೆ ಕ್ರಮ

ಮಂಗಳೂರಿನಲ್ಲಿ ಒಂದು ರೀತಿಯ ಚಿಕಿತ್ಸಾ ವೆಚ್ಚವಿದ್ದರೆ ಬೆಂಗಳೂರಿನಲ್ಲಿ ಮತ್ತೊಂದು ರೀತಿಯ ದರವಿದೆ. ಇದಕ್ಕೆ ಕಡಿವಾಣ ಹಾಕಲು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಗೆ (ಕೆಪಿಎಂಇ) ತಿದ್ದುಪಡಿ ತರುವ ಕುರಿತು ಚರ್ಚೆ ನಡೆಯುತ್ತಿದೆ.

ಆಯುಷ್ಮಾನ್ ಭಾರತ್ ಸೇರಿದಂತೆ ಸರ್ಕಾರಿ ಆರೋಗ್ಯ ವಿಮಾ ಯೋಜನೆಗಳ ಫಲಾನುಭವಿಗಳಿಗೆ ನಗದುರಹಿತ ಚಿಕಿತ್ಸೆ ದೊರೆಯುವಂತೆ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆಯೂ ಚಿಂತನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ನಕಲಿ ಔಷಧಗಳ ಜಾಲದ ಕುರಿತು ವಿಶೇಷ ತನಿಖಾ ತಂಡ (ಎಸ್‌ಐಟಿ) ಸಮಗ್ರ ತನಿಖೆ ನಡೆಸುತ್ತಿದೆ. ವರದಿ ಸಲ್ಲಿಕೆಯಾಗುವವರೆಗೆ ಕಾಯಬೇಕು ಎಂದು ತಿಳಿಸಿದರು.

### ಬಳಸಿದ ಅಡುಗೆ ಎಣ್ಣೆ ಮಾರಾಟದ ಮೇಲೆ ನಿಗಾ

ಬಳಸಿದ ಅಡುಗೆ ಎಣ್ಣೆಯನ್ನು ಸಂಗ್ರಹಿಸಿ ಮರುಸಂಸ್ಕರಿಸಿ ಸಣ್ಣ ಹೋಟೆಲ್‌ಗಳಿಗೆ ಮಾರಾಟ ಮಾಡುತ್ತಿರುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಆತಂಕವಿದೆ. ಈ ಹಿನ್ನೆಲೆಯಲ್ಲಿ ಹೋಟೆಲ್‌ಗಳಲ್ಲಿ ಎಣ್ಣೆಯ ಖರೀದಿ ಮತ್ತು ಬಳಕೆಯ ಪ್ರಮಾಣದ ಮಾಹಿತಿ ಸಂಗ್ರಹಿಸಲು ಪ್ರತ್ಯೇಕ ಆಪ್ ರೂಪಿಸಿ ಮೇಲ್ವಿಚಾರಣೆ ನಡೆಸಲು ಚಿಂತನೆ ನಡೆದಿದೆ. ಉಪ್ಪು, ಸಕ್ಕರೆ ಹಾಗೂ ಅಡುಗೆ ಎಣ್ಣೆಯ ಬಳಕೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ನಿಯಂತ್ರಿಸುವುದೂ ಸರ್ಕಾರದ ಆದ್ಯತೆಯಾಗಿದೆ ಎಂದು ಸಚಿವರು ತಿಳಿಸಿದರು.

# ಇಂದು ಕೆ-ಸೆಟ್ ಪರೀಕ್ಷೆ: ವ್ಯಾಪಕ ಭದ್ರತೆ

● ವಿಕ್ರಮ ವಾಹಿನಿ | ಬೆಂಗಳೂರು

ಪದವಿ ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆಯಾದ ಕೆ–ಸೆಟ್ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭಾನುವಾರ (ಅ.11) ನಡೆಸಲಿದ್ದು, ಕಟ್ಟುನಿಟ್ಟಿನ ಬಿಗಿ ಕ್ರಮಗಳನ್ನು ಕೈಗೊಂಡಿದೆ. ಒಟ್ಟು 37 ವಿವಿಧ ವಿಷಯಗಳಿಗೆ ನಡೆಯುವ ಕೆ–ಸೆಟ್ ಪರೀಕ್ಷೆಗೆ 1,29,212 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಪರೀಕ್ಷೆಗೆ ವ್ಯಾಪಕ ಭದ್ರತೆ ಕೈಗೊಳ್ಳಲಾಗಿದೆ.

11 ಜಿಲ್ಲೆಗಳ (ಬೆಂಗಳೂರು ಉತ್ತರ & ದಕ್ಷಿಣ, ಬಳ್ಳಾರಿ, ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರ್ಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ವಿಜಯಪುರ) 326 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಎಲ್ಲ 37 ವಿಷಯಗಳ ಪರೀಕ್ಷೆ ನಡೆದರೆ, ಉಳಿದ ಜಿಲ್ಲೆಗಳಲ್ಲಿ 13 ವಿಷಯಗಳ ಪರೀಕ್ಷೆ ಗಳು ಮಾತ್ರ ನಡೆಯಲಿವೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1ಗಂಟೆವರೆಗೆ ಪರೀಕ್ಷೆ ನಡೆಯಲಿದ್ದು, ಒಮ್ಮೆಗೇ ಎರಡೂ ಪತ್ರಿಕೆಗಳ (ಪತ್ರಿಕೆ 1 & 2) ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗುತ್ತದೆ. ಅಭ್ಯರ್ಥಿಗಳು ಮೂರು ಗಂಟೆ ಅವಧಿಯಲ್ಲಿ 100 ಅಂಕಗಳ ಸಾಮಾನ್ಯ ಜ್ಞಾನ ಮತ್ತು 200 ಅಂಕಗಳ ವಿಷಯವಾರು ಪತ್ರಿಕೆಗಳಿಗೆ ಉತ್ತರಿಸಬೇಕಾಗುತ್ತದೆ. ಎರಡೂ ಪತ್ರಿಕೆಗಳಿಗೆ ಪ್ರತ್ಯೇಕ ಓಎಂಆರ್ ನೀಡುತ್ತಿದ್ದು, ಆಯಾಯ ಓಎಂಆರ್ ನಲ್ಲೇ ಅವುಗಳ ಉತ್ತರಗಳನ್ನು ಎಚ್ಚರಿಕೆಯಿಂದ ದಾಖಲಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಈ ಹಿಂದಿನ ಎಲ್ಲ ಪರೀಕ್ಷೆಗಳ ಹಾಗೆಯೇ ಈ ಪರೀಕ್ಷೆಗೂ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಪರೀಕ್ಷಾ ಕೇಂದ್ರಗಳ ಪ್ರವೇಶಕ್ಕೂ ಮುನ್ನ ಅಭ್ಯರ್ಥಿಗಳನ್ನು ಮುಖ ಚಹರೆ ಪತ್ತೆ ಮೂಲಕ ತೀವ್ರ ಶೋಧ ನಡೆಸಿಯೇ ಒಳ ಬಿಡಲಾಗುತ್ತದೆ. ಇದಕ್ಕೆ ಅಗತ್ಯ ಪೊಲೀಸ್ ಮತ್ತು ಗೃಹ ರಕ್ಷಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕ್ಯಾಮರಾ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯಲಿದೆ ಎಂದು ಅವರು ವಿವರಿಸಿದ್ದಾರೆ.

# ಜಯನಗರದಲ್ಲಿ ಇಂದಿನಿಂದ ‘ಶಕ್ತಿ ಉತ್ಸವ’

● ವಿಕ್ರಮ ವಾಹಿನಿ | ಬೆಂಗಳೂರು

ದಸರಾ ಮಹೋತ್ಸವದ ಅಂಗವಾಗಿ ಭಾರತದ ಐತಿಹಾಸಿಕ ವೀರರು, ಅವರ ಶೌರ್ಯ ಮತ್ತು ಸಾಹಸಗಾಥೆಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಪರಿಚಯಿಸುವ ‘ಶಕ್ತಿ ಉತ್ಸವ’ ಅ.11ರಿಂದ 21ರವರೆಗೆ ನಗರದ ಜಯನಗರದ ಯುವಪಥದಲ್ಲಿ ನಡೆಯಲಿದೆ.

ಮೈಸೂರು ಸಂಸ್ಥಾನದ ಮಹಾರಾಜ ಜಯಚಾಮರಾಜ ಒಡೆಯರ್ ಅವರ ಪುತ್ರಿ ಮಹಾರಾಜಕುಮಾರಿ ಕಾಮಾಕ್ಷಿ ದೇವಿ ಹಾಗೂ ಅವರ ಸೊಸೆ ದರ್ಶಿಕಾ ಕುಮಾರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪರಮ್ ಹಿಸ್ಟರಿ ಸೆಂಟರ್ ಮತ್ತು ಯುವಕ ಸಂಘ ಜಂಟಿಯಾಗಿ ಉತ್ಸವ ಆಯೋಜಿಸಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ.




ಡಿಜಿಟಲ್ ತಂತ್ರಜ್ಞಾನದಲ್ಲಿ ಇತಿಹಾಸ ದರ್ಶನ

ಉತ್ಸವದಲ್ಲಿ ಹಾಲೋಗ್ರಾಮ್ ತಂತ್ರಜ್ಞಾನದ ಮೂಲಕ ಐತಿಹಾಸಿಕ ವೀರರ ಪರಿಚಯ, ‘ವಾರ್‌ಫ್ಲಿಕ್ಸ್’ ಮೂಲಕ ಯೋಧರ ಸಾಹಸಗಾಥೆಗಳ ಪ್ರದರ್ಶನ ಹಾಗೂ ವರ್ಚುವಲ್ ರಿಯಾಲಿಟಿ (ವಿಆರ್) ತಂತ್ರಜ್ಞಾನದ ಮೂಲಕ ಬ್ರಹ್ಮಾಂಡದ ವಿಸ್ಮಯಗಳನ್ನು ಅನುಭವಿಸುವ ಅವಕಾಶ ಇರಲಿದೆ. ಜತೆಗೆ ಸಂವಾದಾತ್ಮಕ ರಸಪ್ರಶ್ನೆಗಳು ಸೇರಿದಂತೆ ಹಲವು ಆಕರ್ಷಣೆಗಳು ಉತ್ಸವದ ಭಾಗವಾಗಿವೆ.

ಅ.11ರಂದು ಮಧ್ಯಾಹ್ನ 12.15ಕ್ಕೆ ಅಣ್ಣಯ್ಯ ಸಭಾಂಗಣ, ಯುವಪಥ, ಜಯನಗರದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. ಅ.21ರವರೆಗೆ ನಡೆಯುವ ಉತ್ಸವವು ಇತಿಹಾಸ, ಸಂಸ್ಕೃತಿ ಮತ್ತು ತಂತ್ರಜ್ಞಾನವನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುವ ಉದ್ದೇಶ ಹೊಂದಿದೆ.

ಹೆಚ್ಚಿನ ಮಾಹಿತಿಗೆ 9035034728 ಸಂಪರ್ಕಿಸಬಹುದು ಅಥವಾ events@paramexp.org ಇ–ಮೇಲ್ ಮೂಲಕ ಮಾಹಿತಿ ಪಡೆಯಬಹುದು.

# ದಸರಾಗೆ 3000 ವಿಶೇಷ ಬಸ್‌ಗಳ ವ್ಯವಸ್ಥೆ

● ವಿಕ್ರಮ ವಾಹಿನಿ | ಬೆಂಗಳೂರು

ರಾಜ್ಯದ ಹಾಗೂ ದೇಶದ ವಿವಿಧ ಕಡೆಗಳಿಂದ ದಸರಾ ವೀಕ್ಷಣೆಗೆ ಮೈಸೂರಿಗೆ ಬರುವ ಪ್ರವಾಸಿಗರ ಹಾಗೂ ಸಾಲು ಸಾಲು ರಜೆಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮವು 3000 ವಿಶೇಷ ಬಸ್ ವ್ಯವಸ್ಥೆಯನ್ನು ಕಲ್ಪಿಸಲಿದೆ. ಪ್ರಸ್ತುತ ಕಾರ್ಯಾಚರಣೆ ಮಾಡಲಾಗುತ್ತಿರುವ ಕರ್ನಾಟಕ ಸಾರಿಗೆ, ರಾಜಹಂಸ, ಸ್ಲೀಪರ್, ಐರಾವತ, ಐರಾವತ ಕ್ಲಬ್‌ಕ್ಲಾಸ್ ಹಾಗೂ ಅಂಬಾರಿ ಕ್ಲಬ್‌ಕ್ಲಾಸ್, ಪಲ್ಲಕ್ಕಿ ಸ್ಲೀಪರ್, ಅಶ್ವಮೇಧ ಬಸ್ ಸೇವೆ ಜೊತೆಗೆ ಹೆಚ್ಚುವರಿಯಾಗಿ 3,000 ಬಸ್‌ಗಳ ವಿಶೇಷ ಸಾರಿಗೆ ಸೇವೆಯನ್ನು ಒದಗಿಸಲಿದೆ. ದಸರಾ ಹಿನ್ನೆಲೆಯಲ್ಲಿ ಅ.16ರಿಂದ ಅ.20ರವರೆಗೆ ಬೆಂಗಳೂರಿನಿಂದ ರಾಜ್ಯ, ಅಂತಾರಾಜ್ಯದ ವಿವಿಧ ಸ್ಥಳಗಳಿಗೆ ಈ ವಿಶೇಷ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ವಿಶೇಷ ಬಸ್‌ಗಳ ಸೇವೆ ದೊರೆಯಲಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿಜಯನಗರ, ಯಶವಂತಪುರ, ಜಯನಗರ, ಬಸವೇಶ್ವರನಗರ, ದೊಮಲೂರು ಬನಶಂಕರಿ ಹಾಗೂ ಇತರಬಸ್ ನಿಲ್ದಾಣಗಳಿಂದ ಕಾರ್ಯಾಚರಣೆ ಮಾಡಲಾಗುತ್ತದೆ.

ನಂತರ ರಾಜ್ಯದ ಮತ್ತು ಅಂತರರಾಜ್ಯದ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಅ.20–21ರಂದು ಪ್ರಯಾಣಿಕರು ಮರಳಿ ಬರಲು ಅನುಕೂಲವಾಗುವಂತೆ ವಿಶೇಷ ಬಸ್ ಸೇವೆ ಕಲ್ಪಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಮಂಗಳೂರು, ಉಡುಪಿ, ಕುಂದಾಪುರ, ಪುತ್ತೂರು, ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶೃಂಗೇರಿ, ಹೊರನಾಡು, ಶಿವಮೊಗ್ಗ, ಮಡಿಕೇರಿ, ದಾವಣಗೆರೆ, ಗೋಕರ್ಣ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಕಾರವಾರ, ಬಳ್ಳಾರಿ, ಹೊಸಪೇಟೆ, ಕಲಬುರಗಿ, ರಾಯಚೂರು ಮುಂತಾದ ಸ್ಥಳಗಳಿಗೆ ಹಾಗೂ ನೆರೆ ರಾಜ್ಯಗಳಲ್ಲಿನ ಹೈದರಾಬಾದ್, ವಿಜಯವಾಡ, ನೆಲ್ಲೂರು, ಚೆನ್ನೈ, ಊಟಿ, ಕೊಡೈಕೆನಾಲ್, ಸೇಲಂ, ತಿರುಚಿನಾಪಳ್ಳಿ, ಕುಂಭಕೋಣಂ, ಕೊಯಂಬತ್ತೂರು, ಮಧುರೈ, ಪಣಜಿ, ಮಂತ್ರಾಲಯ, ಪೂನಾ, ಎರ್ನಾಕುಲಂ, ಪಾಲಕ್ಕಾಡ್ ಹಾಗೂ ಇತರೆ ಸ್ಥಳಗಳಿಗೆ ವಿಶೇಷ ಬಸ್ ಸೇವೆ ಕಲ್ಪಿಸಲಾಗುತ್ತಿದೆ.

**ಮೈಸೂರು ದಸರಾಗೆ 700 ವಿಶೇಷ ಬಸ್:** ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರಿಗೆ ಪ್ರತ್ಯೇಕವಾಗಿ 300 ಹೆಚ್ಚುವರಿ ಬಸ್‌ಗಳು, ಮೈಸೂರಿನ ಸುತ್ತಮುತ್ತಲಿನ ಪ್ರೇಕ್ಷಣೀಯ, ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಾದ ಚಾಮುಂಡಿಬೆಟ್ಟ, ಕೆ.ಆರ್.ಎಸ್.ಅಣೆಕಟ್ಟು/ಬೃಂದಾವನ, ಶ್ರೀರಂಗಪಟ್ಟಣ, ನಂಜನಗೂಡು ಮಡಿಕೇರಿ, ಮಂಡ್ಯ, ಮಳವಳ್ಳಿ, ಹೆಚ್.ಡಿ.ಕೋಟೆ, ಚಾಮರಾಜನಗರ, ಹುಣಸೂರು, ಕೆ.ಆರ್.ನಗರ, ಗುಂಡ್ಲುಪೇಟೆ ಇತ್ಯಾದಿ ಸ್ಥಳಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಲು 400 ಹೆಚ್ಚುವರಿ ಬಸ್‌ಗಳನ್ನು ಒದಗಿಸಲಾಗುತ್ತದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರಿಗೆ ಫ್ಲೈ ಬಸ್ ಮೂಲಕ ನೇರ ಬಸ್ ಸೇವೆ ದೊರೆಯಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

# ಎಸ್‌ಐಆರ್ ನೆಪದಲ್ಲಿ ವೃದ್ಧೆಯ ಚಿನ್ನದ ಸರ ಕಳವು: ಇಬ್ಬರ ಬಂಧನ

● ವಿಕ್ರಮ ವಾಹಿನಿ | ಉಡುಪಿ

ಎಸ್‌ಐಆರ್ ಕುರಿತು ಮಾಹಿತಿ ಕೇಳುವ ನೆಪದಲ್ಲಿ 74 ವರ್ಷದ ವೃದ್ಧೆಯ ಮನೆಗೆ ನುಗ್ಗಿ ಚಿನ್ನದ ಸರ ಕದ್ದ ಆರೋಪದ ಮೇಲೆ ಇಬ್ಬರನ್ನು ಉಡುಪಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ಚಿನ್ನದ ಸರ, ವಿದ್ಯುತ್ ಸ್ಕೂಟರ್ ಹಾಗೂ ಎರಡು ಮೊಬೈಲ್ ಸೇರಿ 5.53 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅಕ್ಟೋಬರ್ 7ರಂದು ನಿಟ್ಟೂರಿನಲ್ಲಿ ಒಂಟಿಯಾಗಿ ವಾಸಿಸುತ್ತಿದ್ದ ಶಾಂತಾ ಕಾರಂತ್ (74) ಅವರ ಮನೆಗೆ ಬಂದ ಆರೋಪಿಗಳು, ಅವರನ್ನು ಕೆಳಕ್ಕೆ ದೂಡಿ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಅಕ್ಟೋಬರ್ 10ರಂದು ಮಣಿಪಾಲದ ಮಣ್ಣಪಳ್ಳದಲ್ಲಿ ವಾದಿರಾಜ್ ಗಾಣಿಗ (44) ಮತ್ತು ಸಚಿನ್ (30) ಅವರನ್ನು ಬಂಧಿಸಿದ್ದಾರೆ.

ಕದ್ದ ಸರವನ್ನು ಮಣಿಪಾಲದ ಸಹಕಾರಿ ಸೊಸೈಟಿಯಲ್ಲಿ ಅಡವಿಟ್ಟಿರುವುದು ತನಿಖೆಯಲ್ಲಿ ತಿಳಿದುಬಂದಿದೆ. ಸಾಲ ತೀರಿಸಲು ಮತ್ತು ಐಷಾರಾಮಿ ಜೀವನ ನಡೆಸಲು ಕೃತ್ಯ ಎಸಗಿರುವುದಾಗಿ ಆರೋಪಿಗಳು ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, 14 ದಿನಗಳ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ಅವರ ನಿರ್ದೇಶನದಲ್ಲಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯ್ಕ್ ಹಾಗೂ ಡಿವೈಎಸ್‌ಪಿ ಬೆಳ್ಳಿಯಪ್ಪ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕ ಮಹೇಶ್ ಪ್ರಸಾದ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.

# ಎಸ್‌ಐಆರ್ ವಿರೋಧಿಸಿ ವಿದ್ಯಾರ್ಥಿಗಳ ಬಂಧನ

● ವಿಕ್ರಮ ವಾಹಿನಿ | ಬೆಂಗಳೂರು

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ರದ್ದುಗೊಳಿಸುವಂತೆ ಆಗ್ರಹಿಸಿ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ವಿವಿಧ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಕಾರ್ಯಕರ್ತರನ್ನು ಪೊಲೀಸರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬಂಧಿಸಿದ್ದಾರೆ.

ಎಸ್‌ಎಫ್‌ಐ, ಎಐಎಸ್‌ಎ, ಎಐಡಿಎಸ್‌ಒ ಹಾಗೂ ಕೆವಿಎಸ್ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಪ್ರತಿಭಟನೆ ನಡೆಸಿದರು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ರಾಜೀನಾಮೆ ನೀಡಬೇಕು ಹಾಗೂ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣ ರದ್ದುಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

**ಬಂಧನಕ್ಕೆ ಸಿಪಿಐ(ಎಂ) ಖಂಡನೆ:** ಪ್ರತಿಭಟನಾಕಾರರ ಬಂಧನವನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸಿದೆ. ಪ್ರಜಾಸತ್ತಾತ್ಮಕ ಚಳವಳಿಗಳ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸಬೇಕು, ಮುಖ್ಯ ಚುನಾವಣಾ ಆಯುಕ್ತರು ರಾಜೀನಾಮೆ ನೀಡಬೇಕು ಹಾಗೂ ಅಕ್ರಮ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಪಕ್ಷ ಒತ್ತಾಯಿಸಿದೆ.

ದೇಶದ ವಿವಿಧ ಭಾಗಗಳಲ್ಲಿ ಎಸ್‌ಐಆರ್ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದು, ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ವಿರೋಧ ಪಕ್ಷಗಳು ಮತ್ತು ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

# ಚಿತ್ರದುರ್ಗದಲ್ಲಿ ಬರದ ಹೊಡೆತ: ರೈತರು ಕಂಗಾಲು

● ವಿಕ್ರಮ ವಾಹಿನಿ | ಚಿತ್ರದುರ್ಗ

ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಚಿತ್ರದುರ್ಗ ಜಿಲ್ಲೆಯ ಆರೂ ತಾಲೂಕುಗಳಲ್ಲಿ ಬರದ ಛಾಯೆ ಆವರಿಸಿದ್ದು, ಕೃಷಿ ಚಟುವಟಿಕೆಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ವಾಡಿಕೆಯಂತೆ 206 ಮಿ.ಮೀ. ಮಳೆಯಾಗಬೇಕಿದ್ದರೂ ಕೇವಲ 117 ಮಿ.ಮೀ. ಮಳೆಯಾಗಿದೆ. ಶೇ.43ರಷ್ಟು ಮಳೆ ಕೊರತೆಯಿಂದ ಶೇಂಗಾ, ಮೆಕ್ಕೆಜೋಳ, ತೊಗರಿ, ಸೂರ್ಯಕಾಂತಿ ಸೇರಿದಂತೆ ಪ್ರಮುಖ ಬೆಳೆಗಳು ಹಾನಿಗೀಡಾಗಿವೆ. ಅಂತರ್ಜಲ ಮಟ್ಟ ಕುಸಿದಿದ್ದು, ಕುಡಿಯುವ ನೀರು ಮತ್ತು ಜಾನುವಾರುಗಳ ಮೇವಿನ ಸಮಸ್ಯೆಯೂ ಉಲ್ಬಣಿಸಿದೆ.

ಚಳ್ಳಕೆರೆ, ಮೊಳಕಾಲ್ಮೂರು, ಹೊಸದುರ್ಗ, ಚಿತ್ರದುರ್ಗ, ಹಿರಿಯೂರು ಹಾಗೂ ಹೊಳಲ್ಕೆರೆ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಜಿಲ್ಲೆಯ 337 ಕೆರೆಗಳ ಪೈಕಿ 33 ಕೆರೆಗಳಿಗೆ ಮಾತ್ರ ಅಲ್ಪ ಪ್ರಮಾಣದ ನೀರು ಬಂದಿದೆ. ಅಪ್ಪರ್ ಭದ್ರಾ ಯೋಜನೆಯಡಿ ಕೆರೆಗಳಿಗೆ ನೀರು ಹರಿಸುವುದಾಗಿ ಭರವಸೆ ನೀಡಿದ್ದರೂ ಸಮರ್ಪಕ ನೀರು ಲಭ್ಯವಾಗಿಲ್ಲ ಎಂಬುದು ರೈತರ ಅಳಲು.

ಕೃಷಿ ಇಲಾಖೆಯ ಮಾಹಿತಿ ಪ್ರಕಾರ, ಒಂದು ಲಕ್ಷ ಹೆಕ್ಟೇರ್‌ನಲ್ಲಿ ಶೇಂಗಾ ಮತ್ತು ಮೆಕ್ಕೆಜೋಳ ಬೆಳೆಯುವ ಗುರಿ ಹೊಂದಲಾಗಿತ್ತು. ಆದರೆ ತಲಾ 58 ಸಾವಿರ ಹೆಕ್ಟೇರ್‌ನಲ್ಲಷ್ಟೇ ಬಿತ್ತನೆಯಾಗಿದೆ. ತೊಗರಿ ಬಿತ್ತನೆ ಗುರಿ 38ರಿಂದ 40 ಸಾವಿರ ಹೆಕ್ಟೇರ್ ಆಗಿದ್ದರೂ 24 ಸಾವಿರ ಹೆಕ್ಟೇರ್‌ಗೆ ಸೀಮಿತವಾಗಿದೆ.

ಮಳೆ ಕೊರತೆಯಿಂದ ಬೆಳೆಗಳ ಇಳುವರಿ ಕುಸಿಯುವ ಆತಂಕ ಎದುರಾಗಿದೆ. ತೋಟಗಾರಿಕೆ ಬೆಳೆಗಳ ಪೈಕಿ ಈರುಳ್ಳಿ, ಟೊಮ್ಯಾಟೊ, ಹಸಿಮೆಣಸಿನಕಾಯಿ ಸೇರಿದಂತೆ ಒಟ್ಟು 16,560.80 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ಇಲಾಖೆ ತಿಳಿಸಿದೆ.

ಹಿರಿಯೂರು ತಾಲೂಕಿನ ಐಮಂಗಲ ಸುತ್ತಮುತ್ತ ಅಂತರ್ಜಲ ಕುಸಿತದಿಂದ ಅಡಿಕೆ ತೋಟಗಳು ಒಣಗಿವೆ. ನೀರಿನ ಕೊರತೆಯಿಂದ ಸುಮಾರು 1,500 ಅಡಿಕೆ ಗಿಡಗಳನ್ನು ಕಿತ್ತುಹಾಕಿರುವುದಾಗಿ ರೈತರು ಅಳಲು ತೋಡಿಕೊಂಡಿದ್ದಾರೆ.

ಚಿತ್ರದುರ್ಗ ತಾಲೂಕಿನ ಕೂನಬೇವು–ಗೊಲ್ಲರಹಟ್ಟಿಯಲ್ಲಿ ಎರಡು ಎಕರೆ ಈರುಳ್ಳಿ ಬೆಳೆದ ರೈತ ಮಹಿಳೆ ಜಯವಾಣಿ ಅವರಿಗೆ ನಿರೀಕ್ಷಿತ ಇಳುವರಿಯ ಬದಲು ಕೇವಲ 15 ಚೀಲ ಫಸಲು ದೊರೆತಿದೆ. ಇದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ಅವರು ತಿಳಿಸಿದ್ದಾರೆ.

ರೈತ ಮುಖಂಡ ಲಕ್ಷ್ಮೀಕಾಂತ್ ಅವರು, ಜಾನುವಾರುಗಳಿಗೆ ಮೇವು ಮತ್ತು ಜನರಿಗೆ ಕುಡಿಯುವ ನೀರು ಒದಗಿಸಬೇಕು. ಹೋಬಳಿ ಮಟ್ಟದಲ್ಲಿ ಗೋಶಾಲೆಗಳನ್ನು ತೆರೆಯಬೇಕು ಹಾಗೂ ರೈತರಿಗೆ ಎಕರೆಗೆ 30 ಸಾವಿರದಿಂದ 50 ಸಾವಿರದವರೆಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಗತಿಪರ ರೈತರು ಬೆಳೆ ನಷ್ಟಕ್ಕೆ ಪರಿಹಾರ, ಸಾಲಮನ್ನಾ, ಹೊಸ ಸಾಲದ ವ್ಯವಸ್ಥೆ, ಉಚಿತ ಬೀಜ–ಗೊಬ್ಬರ ವಿತರಣೆ ಮತ್ತು ಕೆರೆಗಳಿಗೆ ನೀರು ತುಂಬಿಸುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ. ಬರ ಘೋಷಣೆಗೆ ಸೀಮಿತವಾಗದೆ ರೈತರ ಸಂಕಷ್ಟ ನಿವಾರಣೆಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬುದು ಜಿಲ್ಲೆಯ ರೈತರ ಒಕ್ಕೊರಲಿನ ಬೇಡಿಕೆಯಾಗಿದೆ.

# ಯೂಟ್ಯೂಬ್ ನಕಲಿ ಜಾಹೀರಾತಿಗೆ ಮರುಳಾಗಿ 21.93 ಲಕ್ಷ ಕಳೆದುಕೊಂಡ ಉದ್ಯಮಿ

● ವಿಕ್ರಮ ವಾಹಿನಿ | ಬೆಳಗಾವಿ

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಅಧಿಕ ಲಾಭ ಗಳಿಸಬಹುದು ಎಂಬ ಯೂಟ್ಯೂಬ್‌ನ ನಕಲಿ ಜಾಹೀರಾತನ್ನು ನಂಬಿದ 60 ವರ್ಷದ ವ್ಯಕ್ತಿಯೊಬ್ಬರು 21.93 ಲಕ್ಷ ಕಳೆದುಕೊಂಡಿದ್ದಾರೆ. ಬೆಳಗಾವಿಯ ಹಿಂದವಾಡಿ ನಿವಾಸಿ ಕಿಶೋರ ವಂಚನೆಗೆ ಒಳಗಾದವರು. ಈ ಸಂಬಂಧ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂನ್ 20ರಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹೆಸರಿನಲ್ಲಿ ಪ್ರಸಾರವಾದ ಷೇರು ಹೂಡಿಕೆಯ ಜಾಹೀರಾತನ್ನು ಕಿಶೋರ ವೀಕ್ಷಿಸಿದ್ದರು. ಅದರಲ್ಲಿದ್ದ ಕೊಂಡಿಯ ಮೂಲಕ ಹೆಸರು, ವಿಳಾಸ ನೀಡಿ ನೋಂದಣಿ ಮಾಡಿಕೊಂಡಿದ್ದರು. ಬಳಿಕ ಸಂದೀಪ್ ಶರ್ಮಾ ಎಂಬಾತ ಕರೆ ಮಾಡಿ ಅವರನ್ನು ಟೆಲಿಗ್ರಾಮ್ ಗುಂಪಿಗೆ ಸೇರಿಸಿದ್ದ. ನಂತರ ಪ್ರಿಯಾಂಶ್ ಶರ್ಮಾ ಎಂಬಾತ ಫೋನ್‌ಪೇ ಮೂಲಕ ಮೊದಲಿಗೆ 22 ಸಾವಿರ ವರ್ಗಾಯಿಸಿಕೊಂಡಿದ್ದ.

ಹೆಚ್ಚಿನ ಹಣ ಹೂಡಿಕೆ ಮಾಡಿದರೆ ಅಧಿಕ ಲಾಭ ದೊರೆಯಲಿದೆ ಎಂದು ನಂಬಿಸಿ, ವೆಬ್‌ಸೈಟ್ ಮೂಲಕ ಹಂತ ಹಂತವಾಗಿ ಒಟ್ಟು 21,93,999 ವರ್ಗಾಯಿಸಿಕೊಳ್ಳಲಾಗಿದೆ. ಆದರೆ ಹೂಡಿಕೆ ಮಾಡಿದ ಹಣವಾಗಲಿ, ಭರವಸೆ ನೀಡಿದ ಲಾಭವಾಗಲಿ ದೊರೆಯದೆ ವಂಚನೆಗೆ ಒಳಗಾಗಿರುವುದಾಗಿ ಕಿಶೋರ ದೂರಿನಲ್ಲಿ ತಿಳಿಸಿದ್ದಾರೆ.

# ಮಾಧ್ವ ತತ್ವಜ್ಞಾನ ಜನಸಾಮಾನ್ಯರಿಗೆ ತಲುಪಲಿ: ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ

● ವಿಕ್ರಮ ವಾಹಿನಿ | ಮೈಸೂರು

ಮಾಧ್ವ ತತ್ವಜ್ಞಾನವು ಜೀವನದ ಹಲವು ಸಮಸ್ಯೆ ಮತ್ತು ಸವಾಲುಗಳಿಗೆ ಪರಿಹಾರ ಸೂಚಿಸುವ ಶಕ್ತಿಯನ್ನು ಹೊಂದಿದ್ದು, ಅದನ್ನು ವಿವಿಧ ಮಾಧ್ಯಮಗಳ ಮೂಲಕ ಹೆಚ್ಚಿನ ಜನರಿಗೆ ತಲುಪಿಸಬೇಕಿದೆ ಎಂದು ಸೋಸಲೆ ವ್ಯಾಸರಾಜ ಮಠದ ಪೀಠಾಧಿಪತಿ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಹೇಳಿದರು.

ಕೃಷ್ಣಮೂರ್ತಿಪುರಂನ ಶ್ರೀ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನ ಆಯೋಜಿಸಿದ್ದ ಶ್ರೀ ವಾದಿರಾಜ ತೀರ್ಥ ವಿರಚಿತ ‘ಪಂಚೀಕರಣ’ ಆಟದ ವಿಶೇಷ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಅನುಗ್ರಹ ಸಂದೇಶ ನೀಡಿದರು. ಆಚಾರ್ಯ ಮಧ್ವರ ತತ್ವಜ್ಞಾನವು ಜೀವನದ ವಿವಿಧ ಆಯಾಮಗಳನ್ನು ಒಳಗೊಂಡಿದ್ದು, ಮೋಕ್ಷದ ಮಾರ್ಗವನ್ನೂ ಪ್ರತಿಪಾದಿಸುತ್ತದೆ.

ಸೃಷ್ಟಿ, ಸ್ಥಿತಿ ಮತ್ತು ಲಯದಂತಹ ಗಹನ ತಾತ್ವಿಕ ವಿಚಾರಗಳನ್ನು ಪಂಚೀಕರಣ ಆಟ ಸರಳವಾಗಿ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ಇಂತಹ ಕಾರ್ಯಾಗಾರಗಳು ನಿರಂತರವಾಗಿ ನಡೆಯಬೇಕು ಎಂದು ತಿಳಿಸಿದರು.

**ತತ್ವಜ್ಞಾನ ಅರಿಯಲು ಸರಳ ಮಾರ್ಗ:** ಮುಖ್ಯ ಅತಿಥಿಯಾಗಿದ್ದ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ. ಡಿ.ಪಿ. ಮಧುಸೂದನಾಚಾರ್ಯ ಮಾತನಾಡಿ, ಮಾಧ್ವ ಸಂಪ್ರದಾಯದ ತತ್ವಜ್ಞಾನವನ್ನು ಜನಸಾಮಾನ್ಯರಿಗೆ ಸುಲಭವಾಗಿ ತಲುಪಿಸುವಲ್ಲಿ ಪಂಚೀಕರಣ ಆಟದಂತಹ ಸಾಂಪ್ರದಾಯಿಕ ಪ್ರಾತ್ಯಕ್ಷಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.



**ಮೈಸೂರಿನ ಬೈಲಕುಪ್ಪೆಗೆ ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ಟಿಬೆಟಿಯನ್ ಕೇಂದ್ರ ಆಡಳಿತದ ಬೆಂಗಳೂರಿನ ಮುಖ್ಯಪ್ರತಿನಿಧಿ ಜಿಗ್ಮೆ ಸುಲ್ಟಿಮ್ ಅವರು ಸಿಎಂ ಡಿ ಕೆ ಶಿವಕುಮಾರ್ ಗೃಹ ಕಚೇರಿ ಕೃಷ್ಣಾದಲ್ಲಿ ಶನಿವಾರ ಭೇಟಿ ಮಾಡಿ, ಸಮಾಲೋಚನೆ ನಡೆಸಿದರು. ಬೈಲಕುಪ್ಪೆಯ ಟಿಬೆಟಿಯನ್ ಆಡಳಿತಾಧಿಕಾರಿ ಗವಾಂಗ್ ತೆಂಜಿನ್, ಪಿಆರ್ ಒ ಕುಂಗಾ ಯೆಶಿ, ಲಂಪೊ ವಿಹಾರದ ಆಡಳಿತಾಧಿಕಾರಿ ಕಥೇನ್ ಲೋಬ್ಸಾಂಗ್ ಸೆತನ್, ಪ್ರಧಾನ ಕಾರ್ಯದರ್ಶಿ ನವಾಂಗ್ ಲೋಬ್ಸಾಂಗ್, ತೆಂಜಿನ್ ನೊರ್ಗ್ಯಾಲ್ ಅವರು ಉಪಸ್ಥಿತರಿದ್ದರು.**

ಭಾಗವತ ಸೇರಿದಂತೆ ಶಾಸ್ತ್ರಗ್ರಂಥಗಳಲ್ಲಿ ವಿವರಿಸಿರುವ ಸೃಷ್ಟಿ, ಸ್ಥಿತಿ ಮತ್ತು ಲಯದ ಪ್ರಕ್ರಿಯೆಗಳನ್ನು ಈ ಆಟದ ಮೂಲಕ ಸುಲಭವಾಗಿ ಗ್ರಹಿಸಬಹುದು ಎಂದು ಹೇಳಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಪ್ರತಿಷ್ಠಾನವು ವ್ಯಾಸರಾಜ ಮಠದ ಗುರುಪರಂಪರೆಗೆ ಸಂಬಂಧಿಸಿದ ಸಂಶೋಧನೆ, ಗ್ರಂಥಗಳ ಸಂರಕ್ಷಣೆ ಮತ್ತು ಜ್ಞಾನಪ್ರಸಾರದ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದರು.

ವ್ಯಾಸತೀರ್ಥ ವಿದ್ಯಾಪೀಠದ ಅಧ್ಯಾಪಕ ಶ್ರೀಕಾಂತಾಚಾರ್ಯ ಅವರು ಕಾರ್ಯಾಗಾರದಲ್ಲಿ ಪಂಚೀಕರಣ ಆಟದ ತರಬೇತಿ ನೀಡಿದರು. ಸಮಾರೋಪದಲ್ಲಿ ವಿದ್ಯಾರ್ಥಿಗಳು ಶ್ರೀಗಳ ಸಮ್ಮುಖದಲ್ಲಿ ಆಟದ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು. ಕಾರ್ಯಾಗಾರದಲ್ಲಿ ಪಾಲ್ಗೊಂಡವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಪ್ರತಿಷ್ಠಾನದ ಉಪನಿರ್ದೇಶಕ ಸುಘೋಷ ಆಚಾರ್ಯ ಉಪಸ್ಥಿತರಿದ್ದರು.

# ಪೊಲೀಸ್ ಆಯುಕ್ತರ ಕಚೇರಿ ಮುಂದೆ ಕಾರಿಗೆ ಬೆಂಕಿ

● ವಿಕ್ರಮ ವಾಹಿನಿ | ಬೆಂಗಳೂರು

ನಗರದ ಇನ್ಫೆಂಟ್ರಿ ರಸ್ತೆಯಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಮುಂಭಾಗದಲ್ಲಿ ಚಲಿಸುತ್ತಿದ್ದ ಟೊಯೊಟಾ ಟೈಸರ್ ಕಾರಿನಲ್ಲಿ ಹಠಾತ್ ಬೆಂಕಿ ಕಾಣಿಸಿಕೊಂಡು ಸಂಪೂರ್ಣ ಕಾರು ಹೊತ್ತಿ ಉರಿದಿದೆ. ಜಕ್ಕೂರಿನಿಂದ ಬರುತ್ತಿದ್ದ ಕಾರನ್ನು ಶಬ್ಬೀರ್ ಚಲಾಯಿಸುತ್ತಿದ್ದರು. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಅವರು ತಕ್ಷಣ ಕಾರಿನಿಂದ ಇಳಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಮೀಪದ ಸ್ಪರ್ಶ್ ಆಸ್ಪತ್ರೆಯ ಸಿಬ್ಬಂದಿ ಹಾಗೂ ಸ್ಥಳೀಯರು ಬೆಂಕಿ ನಂದಿಸಲು ಪ್ರಯತ್ನಿಸಿದರು. ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಶಂಕಿಸಲಾಗಿದ್ದು, ಘಟನೆಯಿಂದ ಕೆಲಕಾಲ ಸಂಚಾರ ದಟ್ಟಣೆ ಉಂಟಾಯಿತು.

www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481
ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

# ಮುದ್ದೇನಹಳ್ಳಿಯಲ್ಲಿ ಇಂದಿನಿಂದ ನವರಾತ್ರಿ ಆಚರಣೆ

● ವಿಕ್ರಮ ವಾಹಿನಿ । ಚಿಕ್ಕಬಳ್ಳಾಪುರ

ಸದ್ಗುರು ಶ್ರೀ ಮಧುಸೂದನ ಸಾಯಿಯವರ ದಿವ್ಯ ಆಶೀರ್ವಾದದೊಂದಿಗೆ ಜಿಲ್ಲೆಯ ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಗ್ರಾಮದಲ್ಲಿ ಶ್ರೀ ಸತ್ಯಸಾಯಿ ಆರಾಧನಾ ಟ್ರಸ್ಟ್ ವತಿಯಿಂದ ಅ.11 ರಿಂದ 21ರವರೆಗೆ ಅದ್ದೂರಿಯಾಗಿ ದುರ್ಗಾ ಪೂಜೆ ಹಾಗೂ ನವರಾತ್ರಿ ಮಹೋತ್ಸವ ಆಚರಣೆ ನಡೆಸಲಾಗುತ್ತದೆ.

ಒಂದು ವಿಶ್ವ ಒಂದು ಕುಟುಂಬ ಮಿಷನ್ ಎನ್ನುವ ಸದಾಶಯದೊಂದಿಗೆ ನವರಾತ್ರಿ ಹೋಮ, ದುರ್ಗಾ ಪೂಜೆ ಮತ್ತು ಮಹಾ ರುದ್ರ ಯಾಗ ವಿಶೇಷಣಗಳು ನಡೆಯಲಿವೆ. ಔದಾರ್ಯ ಮತ್ತು ಮೂರು ಲೋಕಗಳ ತಾಯಿಯಾದ ದೇವಿಗೆ ನಮಸ್ಕರಿಸುವ ಈ ಪರ್ವದಲ್ಲಿ ನವರಾತ್ರಿಯು ದೇವಿ, ದೈವಿಕ ಮಾತೆಯನ್ನು ಗೌರವಿಸಲು ಆಚರಿಸಲಾಗುವ ಹಬ್ಬವಾಗಿದೆ. ಹೋಮಗಳಂತಹ ಆಧ್ಯಾತ್ಮಿಕ ಕ್ರಿಯೆಗಳನ್ನು ಮನಸ್ಸು ಮತ್ತು ದೇಹವನ್ನು ಶುದ್ಧಿಗೊಳಿಸಲು, ಶಾಂತಿ ಮತ್ತು ಸಮಾಧಾನವನ್ನು ತರಲು ನಡೆಸಲಾಗುತ್ತದೆ ಎಂದು ಶ್ರೀ ಸತ್ಯಸಾಯಿ ಆರಾಧನಾ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.



ಅ.11 ರಂದು ಭಾನುವಾರದಿಂದ 21ರ ಬುಧವಾರದವರೆಗೆ ಶ್ರೀ ಸತ್ಯಸಾಯಿ ಹೃದಯ ಮಂದಿರಂ ಗ್ರೌಂಡ್ಸ್ ನ ಯಾಗಶಾಲೆಯಲ್ಲಿ ಪ್ರತಿದಿನ ಬೆಳಿಗ್ಗೆ 7–30ರಿಂದ ಈ ಧಾರ್ಮಿಕ ಆಚರಣೆಗಳು ನಡೆಯಲಿವೆ. ಮೊದಲ ದಿನ ಬೆಳಿಗ್ಗೆ 07:30ಕ್ಕೆ ಸಹಸ್ರ ಮೋದಕ ಗಣಪತಿ ಹೋಮ, ನವಗ್ರಹ ಹೋಮ & ಶನಿ ಶಾಂತಿ, ಅ.12 ರಂದು ಸೋಮವಾರ ದುರ್ಗಾ ಹೋಮ, ಭಗವತಿ ತ್ರಿಕಾಲ ಪೂಜೆ ಮತ್ತು ಸಮೂಹಿಕ ಲಲಿತಾ ಸಹಸ್ರನಾಮ, ಅ. 13 ರಂದು ಮಂಗಳವಾರ ಪವಮಾನ ಹೋಮ ಮತ್ತು ಅಶ್ಲೇಷಬಲಿ, ಅ.14ರ ಬುಧವಾರದಂದು ಧನ್ವಂತರಿ ಹೋಮ, ವಿಷ್ಣು ಸಹಸ್ರನಾಮ ಹೋಮ, ಅ.15 ರಂದು ಲಲಿತಾ ಹೋಮ, ದುರ್ಗಾ ಹೋಮ, ಸುವಾಸಿನಿ ಮತ್ತು ಕನ್ನಿಕಾ ಪೂಜೆ, ಅ.16 ರಂದು ಶುಕ್ರವಾರ ಮೇಧಾ ದಕ್ಷಿಣಾಮೂರ್ತಿ ಹೋಮ ಮತ್ತು ಮಹಾ ಸರಸ್ವತಿ ಹೋಮ, ಅ.17 ರಂದು ಶನಿವಾರ ಲಕ್ಷ್ಮಿ ನರಸಿಂಹ ಹೋಮ ಮತ್ತು ಗಾಯತ್ರಿ ಹೋಮ, ಅ.18ರಂದು ಭಾನುವಾರ ರಾಮತಾರಕ ಹೋಮ, ಅಂಜನೇಯ ಹೋಮ ಮತ್ತು ಸಾಯಿ ಗಾಯತ್ರಿ ಜಪ ಪುರಸ್ಸರ ಹೋಮ, ಅ.19ರ ಸೋಮವಾರ ಶಿವ ಪಂಚಾಕ್ಷರಿ ಹೋಮ, ಸಪ್ತದ್ರವ್ಯ ಮೃತ್ಯುಂಜಯ ಹೋಮ, ಅ.20ರಂದು ಮಂಗಳವಾರ ಚಂಡಿಕಾ ಹೋಮ ಮತ್ತು ಅ.21ರಂದು ಬುಧವಾರ ಲಕ್ಷ್ಮಿ ನಾರಾಯಣ ಹೃದಯ ಹೋಮ, ಕುಬೇರ ಲಕ್ಷ್ಮಿ ಹೋಮ ಮತ್ತು ಮಹಾ ಪೂರ್ಣಾಹುತಿ ಜರುಗಲಿವೆ.

ಪ್ರತಿ ಸಂಜೆ 4:00 ಗಂಟೆಗೆ ಲಲಿತಾ ಸಹಸ್ರನಾಮ ಕುಂಕುಮ ಅರ್ಚನೆ, ಚಂಡಿಕಾ ಪಾರಾಯಣ, ಲಕ್ಷ್ಮಿ ನಾರಾಯಣ ಹೃದಯ ಪಾರಾಯಣ & ಮಹಾಮಂಗಳಾರತಿಗಳು ಜರುಗಲಿವೆ.

ಈ ಶುಭ ಸಂದರ್ಭದಲ್ಲಿ ಶ್ರೀ ಸೃಷ್ಟಿ ಶಕ್ತಿಯನ್ನು ಒಂಭತ್ತು ದಿನಗಳ ಕಾಲ ಆಕೆಯ ಒಂಭತ್ತು ರೂಪಗಳಲ್ಲಿ ಪೂಜಿಸಲಾಗುವುದು – ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕುಶ್ಮಾಂಡ, ಸ್ಕಂದಮಾತಾ, ಕಾತ್ಯಾಯಿನಿ, ಕಾಲರಾತ್ರಿ, ಮಹಾಗೌರಿ ಮತ್ತು ಸಿದ್ಧಿದಾತ್ರಿ ಸ್ವರೂಪದಲ್ಲಿ ಪೂಜಿಸಲಾಗುತ್ತಿದೆ. ಬೆಳಿಗ್ಗೆ 08:30 ರಿಂದ 11:30 ಮತ್ತು ಸಂಜೆ 07:00 – ಸಂಧ್ಯಾ ಆರತಿ ಇರಲಿದೆ.

ಮಾ ದುರ್ಗೆಯ ವಿಗ್ರಹಗಳನ್ನು ಗಂಗಾ ನದಿಯ ಮಣ್ಣಿನಿಂದ ಮಾಡಲಾಗಿದ್ದು, ಕುಮಾರ್ತೋಳಿ (ಕುಮಾರ್ಟೋಲಿ), ಉತ್ತರ ಕೋಲ್ಕತ್ತಾ, ಪಶ್ಚಿಮ ಬಂಗಾಲದ ಸಾಂಪ್ರದಾಯಿಕ ಕುಂಬಾರರ ಮೂಲೆಯಿಂದ ವಿಶೇಷವಾಗಿ ತರಲಾಗಿದೆ. ಬಂಗಾಲದ ಸಾಂಪ್ರದಾಯಿಕ ಡಾಕಿ ವಾದ್ಯಗಾರರು ಹಬ್ಬದ ಲಯ ಮತ್ತು ಮೋಡಿಮಗೊಳಿಸುವ ತಾಳಗಳನ್ನು ನುಡಿಸುತ್ತಾರೆ.

ಮಹಾ ಅಷ್ಟಮಿ ದಿನದಂದು ಕುಮಾರಿ ಪೂಜೆ ನಡೆಯಲಿದ್ದು, ಅಲ್ಲಿ ಯುವ, ಅವಿವಾಹಿತ ಹುಡುಗಿಯರನ್ನು ಮಾತೆ ದುರ್ಗೆಯಾಗಿ ಪೂಜಿಸಲಾಗುತ್ತದೆ. ರುದ್ರ ಹೋಮವನ್ನು ವಿಶ್ವ ಶಾಂತಿ ಮತ್ತು ಸಮೃದ್ಧಿಗಾಗಿ ಮಾಡಲಾಗುತ್ತಿದ್ದು, ಮಹಾ ರುದ್ರ ಯಾಗವನ್ನು ಅ. 18 ರಿಂದ 21ರವರೆಗೆ ನಾಲ್ಕು ದಿನಗಳ ಕಾಲ ನಡೆಸಲಾಗುತ್ತದೆ.

ಮಹಾ ರುದ್ರ ಯಾಗವನ್ನು ಬೆಳಗಿನ ಜಾವದಲ್ಲಿ ನಡೆಸಲಾಗುತ್ತಿದ್ದು, ಬೆಳಿಗ್ಗೆ 06:30ಕ್ಕೆ ಅರುಣ ಪಾರಾಯಣ, 07:15ಕ್ಕೆ – ಮಹಾನ್ಯಾಸ ಪಾರಾಯಣ, 07:45ಕ್ಕೆ ಪಂಚಾಮೃತ ಅಭಿಷೇಕ, 08:00ಕ್ಕೆ ರುದ್ರ ಪಾರಾಯಣ & ರುದ್ರ ಅಭಿಷೇಕ, 10:00ಕ್ಕೆ ರುದ್ರ ಹೋಮ, ಮೃತ್ಯುಂಜಯ ಹೋಮ ಮತ್ತು ಸಾಯಿ ಗಾಯತ್ರಿ ಹೋಮ, 11:30ಕ್ಕೆ ಅಷ್ಟಾವಧಾನ ಸೇವೆ ಮತ್ತು ಮಹಾ ಮಂಗಳಾರತಿ ಇರಲಿದೆ. ಸಂಜೆಯ ಹೊತ್ತು ಮಹಾ ರುದ್ರ ಯಾಗದ ನಿಮಿತ್ತ 04:00ಕ್ಕೆ ಕ್ರಮ ಅರ್ಚನೆ ಮತ್ತು ಘನ ಪಾಠ, 05:00ಕ್ಕೆ ಮಹಾ ಮಂಗಳಾರತಿ ಇರಲಿದೆ.

ಅ.21 ರಂದು ಬುಧವಾರ ದಶಮಿಯಂದು ಬೆಳಿಗ್ಗೆ 05:30ಕ್ಕೆ ಮಂಗಳವಾದ್ಯ, 06:30ಕ್ಕೆ ಅರುಣ ಪಾರಾಯಣ, ಮಹಾನ್ಯಾಸ ಪಾರಾಯಣ, ರುದ್ರ ಪಾರಾಯಣ ಮತ್ತು ರುದ್ರ ಅಭಿಷೇಕ, 10:00ಕ್ಕೆ ರುದ್ರ ಹೋಮ, ಸಾಯಿ ಗಾಯತ್ರಿ ಹೋಮ & ಮಹಾ ಪೂರ್ಣಾಹುತಿ, 11:15ಕ್ಕೆ ಅಗ್ನಿ ಸಂಯೋಜನೆ, ಕುಂಭಾಭಿಷೇಕಂ ಮತ್ತು ಮಹಾ ಮಂಗಳಾರತಿ ಇರಲಿದೆ. ಪ್ರತಿದಿನ ಸಂಜೆ 5–30ರಿಂದ ಸಾಯಿ ಕೃಷ್ಣನ್ ಪ್ರೇಮಾಮೃತ ಹಾಲ್ ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

# *ಮೈಸೂರು ದಸರಾ ವೈಭವದ ಐತಿಹಾಸಿಕ ಬೇರು ಹಂಪಿಯ ಮಹಾನವಮಿ ದಿಬ್ಬ*

● ವಿಕ್ರಮ ವಾಹಿನಿ । ವಿಶೇಷ

*ನಾಡಹಬ್ಬ ಮೈಸೂರು ದಸರಾ ಮತ್ತೆ ಬಂದಿದೆ. ನಾಡಿನಾದ್ಯಂತ ನವರಾತ್ರಿ ಸಂಭ್ರಮ ಮನೆಮಾಡಿದ್ದು, ವಿಶ್ವವಿಖ್ಯಾತ ಮೈಸೂರು ದಸರಾ ವೀಕ್ಷಿಸಲು ದೇಶ–ವಿದೇಶಗಳಿಂದ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಧಾರ್ಮಿಕ ಶ್ರದ್ಧೆ, ಸಾಂಸ್ಕೃತಿಕ ವೈಭವ ಮತ್ತು ರಾಜಪರಂಪರೆಯ ಪ್ರತೀಕವಾಗಿರುವ ಈ ಉತ್ಸವದ ಐತಿಹಾಸಿಕ ಹಿನ್ನೆಲೆಯನ್ನು ಅರಸಿದಾಗ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯ ಮಹಾನವಮಿ ದಿಬ್ಬ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ವಿಜಯನಗರದ ಅರಸರ ನವರಾತ್ರಿ ಉತ್ಸವ, ರಾಜದರ್ಬಾರು ಹಾಗೂ ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾಗಿರುವ ಈ ಸ್ಮಾರಕ ಇಂದಿಗೂ ಗತವೈಭವದ ನೆನಪನ್ನು ಹೊತ್ತಿದೆ.*

*ಕರ್ನಾಟಕದಲ್ಲಿ ದಸರಾ ಆಚರಣೆಗೆ ಶತಮಾನಗಳ ಇತಿಹಾಸವಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಂಪಿಯಲ್ಲಿ ಹತ್ತು ದಿನಗಳ ಕಾಲ ನವರಾತ್ರಿ ಉತ್ಸವವನ್ನು ವೈಭವದಿಂದ ಆಚರಿಸಲಾಗುತ್ತಿತ್ತು. ಧಾರ್ಮಿಕ ವಿಧಿವಿಧಾನಗಳು, ರಾಜದರ್ಬಾರು, ಮೆರವಣಿಗೆಗಳು ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ಸವದ ಪ್ರಮುಖ ಆಕರ್ಷಣೆಗಳಾಗಿದ್ದವು. ಈ ಆಚರಣೆಗಳಿಗೆ ವೇದಿಕೆಯಾಗಿದ್ದ ಮಹಾನವಮಿ ದಿಬ್ಬವನ್ನು ದಸರಾ ದಿಬ್ಬ ಎಂದೂ ಕರೆಯಲಾಗುತ್ತದೆ.*

***ಅರಸರ ಉತ್ಸವಕ್ಕೆ ರಾಜವೇದಿಕೆ:*** *ಹಂಪಿಯ ರಾಜಪ್ರಾಂಗಣದಲ್ಲಿರುವ ಮಹಾನವಮಿ ದಿಬ್ಬವು ವಿಜಯನಗರದ ಅರಸರು ಮತ್ತು ರಾಜಮನೆತನದವರು ನವರಾತ್ರಿ ಉತ್ಸವಗಳನ್ನು ವೀಕ್ಷಿಸುತ್ತಿದ್ದ ಪ್ರಮುಖ ವೇದಿಕೆಯಾಗಿತ್ತು. ದಿಬ್ಬದ ಮೇಲಿನಿಂದ ಅರಸರು ಉತ್ಸವ, ಮೆರವಣಿಗೆ ಹಾಗೂ ಇತರ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನರು ಸೇರಿ ಸಂಭ್ರಮಿಸುತ್ತಿದ್ದರು. ಈ ಸ್ಮಾರಕವು ಕೇವಲ ಉತ್ಸವ ವೀಕ್ಷಣೆಯ ಸ್ಥಳವಾಗಿರದೆ, ವಿಜಯನಗರ ಸಾಮ್ರಾಜ್ಯದ ರಾಜಕೀಯ ಶಕ್ತಿ, ಆಡಳಿತ ವೈಭವ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರತೀಕವಾಗಿಯೂ ಗುರುತಿಸಿಕೊಂಡಿದೆ.*



*ಶ್ರೀಕೃಷ್ಣದೇವರಾಯರು ಒಡಿಶಾದ ಉದಯಗಿರಿ ಯುದ್ಧದಲ್ಲಿ ವಿಜಯ ಸಾಧಿಸಿ ಮರಳಿದ ಬಳಿಕ ಮಹಾನವಮಿ ದಿಬ್ಬದ ನಿರ್ಮಾಣಕ್ಕೆ ಸಂಬಂಧಿಸಿದ ಬೆಳವಣಿಗೆಗಳು ನಡೆದವು ಎಂಬ ಐತಿಹಾಸಿಕ ಉಲ್ಲೇಖಗಳಿವೆ. ವಿಜಯನಗರದ ನವರಾತ್ರಿ ಆಚರಣೆಗಳ ಕುರಿತು ವಿದೇಶಿ ಪ್ರವಾಸಿಗರ ಬರಹಗಳಲ್ಲಿಯೂ ಮಾಹಿತಿ ದೊರೆಯುತ್ತದೆ. 1442–1443ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಪರ್ಷಿಯಾದ ಪ್ರವಾಸಿಗ ಅಬ್ದುಲ್ ರಜ್ಜಾಕ್ ಹಾಗೂ 16ನೇ ಶತಮಾನದ ಆರಂಭದಲ್ಲಿ ಆಗಮಿಸಿದ್ದ ಪೋರ್ಚುಗೀಸ್ ಪ್ರವಾಸಿಗ ಡೊಮಿಂಗೊ ಪಯಸ್ ಅವರ ಬರಹಗಳು ರಾಜಧಾನಿಯ ವೈಭವ, ರಾಜದರ್ಬಾರು ಮತ್ತು ಉತ್ಸವಗಳ ಕುರಿತು ಮಹತ್ವದ ವಿವರಗಳನ್ನು ಒದಗಿಸುತ್ತವೆ.*

***ಕಲ್ಲಿನ ಕೆತ್ತನೆಗಳಲ್ಲಿ ವಿಜಯನಗರದ ಬದುಕು***

*ಮಹಾನವಮಿ ದಿಬ್ಬದ ವಾಸ್ತುಶಿಲ್ಪ ವಿಜಯನಗರ ಕಾಲದ ಶಿಲ್ಪಕಲೆಯ ಶ್ರೀಮಂತಿಕೆಯನ್ನು ಸಾರುತ್ತದೆ. ಬೃಹತ್ ಕಲ್ಲುಗಳಿಂದ ನಿರ್ಮಿಸಲಾದ ದಿಬ್ಬದ ವಿವಿಧ ಸ್ತರಗಳು, ಮೆಟ್ಟಿಲುಗಳು ಮತ್ತು ಗೋಡೆಗಳ ಮೇಲಿನ ಉಬ್ಬುಶಿಲ್ಪಗಳು ಅಂದಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಪರಿಚಯಿಸುತ್ತವೆ. ನೃತ್ಯಗಾರರು, ಸಂಗೀತಗಾರರು, ಬೇಟೆಗಾರರು, ವ್ಯಾಪಾರಿಗಳು, ಯೋಧರು, ಆನೆಗಳು ಮತ್ತು ಕುದುರೆಗಳ ಚಿತ್ರಣಗಳು ಇಲ್ಲಿನ ಕೆತ್ತನೆಗಳಲ್ಲಿ ಕಾಣಸಿಗುತ್ತವೆ.*

*ಮೆರವಣಿಗೆಗಳು, ಬೇಟೆಯ ದೃಶ್ಯಗಳು ಹಾಗೂ ವಿವಿಧ ಚಟುವಟಿಕೆಗಳನ್ನು ಬಿಂಬಿಸುವ ಶಿಲ್ಪಗಳು ವಿಜಯನಗರದ ಜನಜೀವನದ ಹಲವು ಆಯಾಮಗಳನ್ನು ತೆರೆದಿಡುತ್ತವೆ. ವಿಶಿಷ್ಟ ವಿನ್ಯಾಸ, ಸೂಕ್ಷ್ಮ ಕೆತ್ತನೆಗಳು ಮತ್ತು ವಾಸ್ತುಶಿಲ್ಪವು ಅಂದಿನ ಕಲಾವಿದರ ಸೃಜನಶೀಲತೆ ಹಾಗೂ ತಾಂತ್ರಿಕ ನೈಪುಣ್ಯಕ್ಕೆ ಸಾಕ್ಷಿಯಾಗಿವೆ. ಇಲ್ಲಿನ ಪ್ರತಿಯೊಂದು ಶಿಲ್ಪವೂ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ನೆನಪಿಸುವಂತಿದೆ.*

***ಹಂಪಿಯಿಂದ ಮೈಸೂರಿಗೆ ದಸರಾ ಪರಂಪರೆ***

*ವಿಜಯನಗರ ಸಾಮ್ರಾಜ್ಯದ ಪತನದ ಬಳಿಕವೂ ಅದರ ಹಲವು ಸಾಂಸ್ಕೃತಿಕ ಸಂಪ್ರದಾಯಗಳು ದಕ್ಷಿಣ ಭಾರತದ ರಾಜಮನೆತನಗಳಲ್ಲಿ ಮುಂದುವರಿದವು. ಮೈಸೂರು ಒಡೆಯರ ಕಾಲದಲ್ಲಿ ದಸರಾ ಆಚರಣೆ ಮತ್ತಷ್ಟು ವೈಭವ ಪಡೆದು, ನಾಡಿನ ಪ್ರಮುಖ ಸಾಂಸ್ಕೃತಿಕ ಉತ್ಸವವಾಗಿ ಬೆಳೆಯಿತು. 1610ರಲ್ಲಿ ರಾಜ ಒಡೆಯರ್ ಅವರು ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆಗೆ ಪ್ರೋತ್ಸಾಹ ನೀಡಿದರು. ನಂತರ ಮೈಸೂರು ಒಡೆಯರು ಈ ಪರಂಪರೆಯನ್ನು ಮುಂದುವರಿಸಿದರು. ಕಾಲಕ್ರಮೇಣ ಜಂಬೂಸವಾರಿ, ಅರಮನೆಯ ದೀಪಾಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿವಿಧ ಪ್ರದರ್ಶನಗಳು ಮೈಸೂರು ದಸರಾದ ಪ್ರಮುಖ ಆಕರ್ಷಣೆಗಳಾದವು.*

*ಹೀಗಾಗಿ, ಮೈಸೂರು ದಸರಾ ಮತ್ತು ವಿಜಯನಗರದ ನವರಾತ್ರಿ ಆಚರಣೆಗಳ ನಡುವಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ಮಹಾನವಮಿ ದಿಬ್ಬ ನೆನಪಿಸುತ್ತದೆ. ಇಂದಿನ ದಸರಾ ವೈಭವವನ್ನು ಆಸ್ವಾದಿಸುವ ಸಂದರ್ಭದಲ್ಲಿ ಅದರ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯುವುದು ಕರ್ನಾಟಕದ ಶ್ರೀಮಂತ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.*



***ಸ್ಮಾರಕದ ಸಂರಕ್ಷಣೆಗೆ ಆದ್ಯತೆ ಅಗತ್ಯ:*** *ಮಹಾನವಮಿ ದಿಬ್ಬವು ರಾಜಮನೆತನದ ಉತ್ಸವಗಳಿಗೆ ಸೀಮಿತವಾದ ವೇದಿಕೆಯಲ್ಲ. ವಿಜಯನಗರ ಸಾಮ್ರಾಜ್ಯದ ಆಡಳಿತ, ಕಲೆ, ಸಂಸ್ಕೃತಿ, ಮನರಂಜನೆ ಮತ್ತು ಸೈನಿಕ ಪರಂಪರೆಯನ್ನು ಶಿಲ್ಪಗಳ ಮೂಲಕ ದಾಖಲಿಸಿರುವ ಅಮೂಲ್ಯ ಐತಿಹಾಸಿಕ ಸ್ಮಾರಕವಾಗಿದೆ. ಇದರ ಮಹತ್ವವನ್ನು ಪ್ರವಾಸಿಗರು ಹಾಗೂ ಮುಂದಿನ ಪೀಳಿಗೆಗೆ ಇನ್ನಷ್ಟು ಪರಿಣಾಮಕಾರಿಯಾಗಿ ಪರಿಚಯಿಸುವ ಅಗತ್ಯವಿದೆ.*

*ಮೈಸೂರು ದಸರಾ ಕರ್ನಾಟಕದ ಹೆಮ್ಮೆಯ ನಾಡಹಬ್ಬವಾಗಿದ್ದರೆ, ಹಂಪಿಯ ಮಹಾನವಮಿ ದಿಬ್ಬ ಆ ವೈಭವದ ಐತಿಹಾಸಿಕ ಬೇರುಗಳನ್ನು ನೆನಪಿಸುವ ಸ್ಮಾರಕವಾಗಿದೆ. ವಿಜಯನಗರದ ಗತವೈಭವವನ್ನು ಸಾರುವ ಈ ಪರಂಪರೆಯನ್ನು ಸಂರಕ್ಷಿಸಿ, ಅದರ ಇತಿಹಾಸವನ್ನು ಜನರಿಗೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.*

# ಅಭಿಜೀತ್ ದೀಪ್ಕೆ ಅಜ್ಜಿ ಸಾವಿತ್ರಿಬಾಯಿ ನಿಧನ

● ವಿಕ್ರಮ ವಾಹಿನಿ । ಹಿಂಗೋಲಿ (ಮಹಾರಾಷ್ಟ್ರ)

ದೆಹಲಿಯಲ್ಲಿ ಪ್ರತಿಭಟನೆಗೆ ತೆರಳಿದ್ದ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರನ್ನು ಪೊಲೀಸರು ವಶಕ್ಕೆ ಪಡೆದ ಕೆಲವೇ ಗಂಟೆಗಳಲ್ಲಿ, ಅವರ ಅಜ್ಜಿ ಸಾವಿತ್ರಿಬಾಯಿ ದೀಪ್ಕೆ (85) ನಿಧನರಾಗಿದ್ದಾರೆ.

ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಸಂತುಕ್ ಪಿಂಪ್ರಿ ಗ್ರಾಮದಲ್ಲಿ ಶನಿವಾರ ಮುಂಜಾನೆ ಸಾವಿತ್ರಿಬಾಯಿ ಕೊನೆಯುಸಿರೆಳೆದಿದ್ದಾರೆ. ಅವರು ಕಳೆದ ಕೆಲವು ದಿನಗಳಿಂದ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು ಎಂದು ತಿಳಿದುಬಂದಿದೆ.

ಅಭಿಜೀತ್ ಅವರ ತಂದೆ ಭಗವಾನ್ ದೀಪ್ಕೆ ಮತ್ತು ತಾಯಿ ಅನಿತಾ ಅವರು ಸದ್ಯ ಛತ್ರಪತಿ ಸಂಭಾಜಿನಗರದಲ್ಲಿದ್ದರು. ಸಾವಿನ ಸುದ್ದಿ ತಿಳಿದ ಬಳಿಕ ಅವರು ಹಿಂಗೋಲಿಯತ್ತ ಪ್ರಯಾಣ ಬೆಳೆಸಿದ್ದಾರೆ. ಇದೇ ವೇಳೆ, ಮುನ್ನೆಚ್ಚರಿಕಾ ಕ್ರಮವಾಗಿ ಸಂಭಾಜಿನಗರದ ಎಂಐಡಿಸಿ ವಾಲುಜ್ ಪ್ರದೇಶದಲ್ಲಿರುವ ದೀಪ್ಕೆ ಕುಟುಂಬದ ನಿವಾಸದ ಸುತ್ತ ಪೊಲೀಸರು ಭದ್ರತೆ ಬಿಗಿಗೊಳಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯಬೇಕಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮುಂಬೈನಿಂದ ದೆಹಲಿಗೆ ಆಗಮಿಸಿದ್ದ ಅಭಿಜೀತ್ ದೀಪ್ಕೆ ಅವರನ್ನು ವಿಮಾನದೊಳಗೇ ಪೊಲೀಸರು ವಶಕ್ಕೆ ಪಡೆದಿದ್ದರು. ಕಳೆದ ಒಂದು ವಾರದಿಂದ ಪ್ರತಿಭಟನಾ ಚಟುವಟಿಕೆಗಳಲ್ಲಿ ನಿರತರಾಗಿದ್ದ ಅವರು ಕುಟುಂಬದೊಂದಿಗೆ ದೂರವಾಣಿ ಮೂಲಕ ಸಂಪರ್ಕದಲ್ಲಿದ್ದರು ಎನ್ನಲಾಗಿದೆ. ಸದ್ಯ ದೆಹಲಿ ಪೊಲೀಸರ ವಶದಲ್ಲಿರುವ ಅಭಿಜೀತ್ ಅವರಿಗೆ ಅಜ್ಜಿಯ ಸಾವಿನ ಸುದ್ದಿ ತಲುಪಿದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

# ಬೇಡ್ತಿ-ಅಘನಾಶಿನಿ ಯೋಜನೆ ಕೈಬಿಡಲು ಆಗ್ರಹ: ಪ್ರತಿಭಟನಾ ಸಭೆಯಲ್ಲಿ 11 ನಿರ್ಣಯ

## ಡಿಪಿಆರ್ ರದ್ದತಿಗೆ ಒತ್ತಾಯ; ನದಿ ತಿರುವಿನಿಂದ ಪರಿಸರ, ಕೃಷಿ ಮತ್ತು ಮೀನುಗಾರಿಕೆಗೆ ಧಕ್ಕೆ ಆತಂಕ

● ವಿಕ್ರಮ ವಾಹಿನಿ । ಬೆಂಗಳೂರು

ಉತ್ತರ ಕನ್ನಡ ಜಿಲ್ಲೆಯ ಜೀವನಾಡಿಗಳಾದ ಬೇಡ್ತಿ ಮತ್ತು ಅಘನಾಶಿನಿ ನದಿಗಳ ಉಳಿವಿಗಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶನಿವಾರ ನಡೆದ ಬೃಹತ್ ಪ್ರತಿಭಟನಾ ಸಭೆಯಲ್ಲಿ ನದಿ ತಿರುವು ಯೋಜನೆಗಳನ್ನು ಕೈಬಿಡುವಂತೆ ಆಗ್ರಹಿಸಿ 11 ನಿರ್ಣಯಗಳನ್ನು ಕೈಗೊಳ್ಳಲಾಯಿತು. ಬೇಡ್ತಿ–ವರದಾ ಹಾಗೂ ಅಘನಾಶಿನಿ–ವೇದಾವತಿ ನದಿ ಜೋಡಣೆ ಯೋಜನೆಗಳನ್ನು ಕೈಬಿಡಬೇಕು ಮತ್ತು ಬೇಡ್ತಿ–ವರದಾ ಯೋಜನೆಯ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವ ಪ್ರಕ್ರಿಯೆ ಸ್ಥಗಿತಗೊಳಿಸಬೇಕು ಎಂದು ಸಭೆ ಒತ್ತಾಯಿಸಿತು.



ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಉತ್ತರ ಕನ್ನಡ ಜಿಲ್ಲೆಯ ಸಾವಿರಾರು ಜನರು ಭಾಗವಹಿಸಿದ್ದರು. ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಶಾಸಕ ಭೀಮಣ್ಣ ನಾಯ್ಕ್, ವಿಜ್ಞಾನಿ ಟಿ.ವಿ. ರಾಮಚಂದ್ರ, ಪರಿಸರ ಹೋರಾಟಗಾರ ಯಲ್ಲಪ್ಪ ರೆಡ್ಡಿ, ಸಾಹಿತಿ ಜಯಂತ್ ಕಾಯ್ಕಿಣಿ, ತೇಜಸ್ವಿನಿ ಅನಂತ್‌ಕುಮಾರ್, ಶಾಂತಾರಾಮ ಸಿದ್ದಿ ಸೇರಿದಂತೆ ಹಲವು ಗಣ್ಯರು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಸ್ಥಳೀಯರ ಅಗತ್ಯ ಅರಿಯದೆ ಯೋಜನೆ ಬೇಡ

ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡಿ, ಬೇಡ್ತಿ–ಅಘನಾಶಿನಿ ನದಿ ಪಾತ್ರದ ಜನರಿಗೆ ಎಷ್ಟು ನೀರು ಅಗತ್ಯವಿದೆ ಎಂಬುದರ ಕುರಿತು ಮೊದಲು ಸಮಗ್ರ ಅಧ್ಯಯನ ನಡೆಸಬೇಕು. ಸೂಕ್ತ ಅಧ್ಯಯನವಿಲ್ಲದೆ ಯೋಜನೆ ರೂಪಿಸುವುದು ಜನರಿಗೆ ಮಾಡುವ ಅನ್ಯಾಯವಾಗಿದೆ. ಬಲಶಾಲಿಗಳ ಒತ್ತಡಕ್ಕೆ ಮಣಿದು ಸರ್ಕಾರ ನಿರ್ಧಾರ ಕೈಗೊಳ್ಳುವುದು ಕಾನೂನು ಮತ್ತು ಮಾನವೀಯತೆಯ ದೃಷ್ಟಿಯಿಂದ ಸರಿಯಲ್ಲ. ಪಶ್ಚಿಮ ಘಟ್ಟ ಮತ್ತು ಅಲ್ಲಿನ ನದಿಗಳ ಸಂರಕ್ಷಣೆ ಇಡೀ ರಾಜ್ಯದ ಜವಾಬ್ದಾರಿಯಾಗಿದೆ ಎಂದರು.

ತೇಜಸ್ವಿನಿ ಅನಂತ್‌ಕುಮಾರ್ ಮಾತನಾಡಿ, ಸಮುದ್ರ ಸೇರುವ ನೀರು ವ್ಯರ್ಥ ಎಂಬ ಆಲೋಚನೆಯೇ ತಪ್ಪು. ಅಭಿವೃದ್ಧಿಯ ವ್ಯಾಖ್ಯಾನವನ್ನು ಮರುಪರಿಶೀಲಿಸಬೇಕಿದ್ದು, ಪರಿಸರ ಸಂರಕ್ಷಣೆಯ ಹೋರಾಟಕ್ಕೆ ಹೊಸ ದಿಕ್ಕು ನೀಡಬೇಕಿದೆ. ನದಿ ನೀರನ್ನು ಬೇರೆಡೆಗೆ ತಿರುಗಿಸುವುದರಿಂದ ಉಂಟಾಗಬಹುದಾದ ಅಪಾಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದರು.

ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಗಿರಿಧರ ಕಜೆ ಮಾತನಾಡಿ, ಪಶ್ಚಿಮ ಘಟ್ಟದ ನದಿಗಳು ಪ್ರಕೃತಿಯ ಹೃದಯವಿದ್ದಂತೆ. ಅವುಗಳ ಸ್ವಾಭಾವಿಕ ಹರಿವಿಗೆ ಅಡ್ಡಿಪಡಿಸುವುದರಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಉಂಟಾಗಬಹುದು. ಕಾಡು ಮತ್ತು ಜನಜೀವನದ ರಕ್ಷಣೆಗಾಗಿ ಜನರು ಬೀದಿಗಿಳಿಯುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುರದೃಷ್ಟಕರ ಎಂದರು.

**ವೈಜ್ಞಾನಿಕ ಅಧ್ಯಯನಕ್ಕೆ ಒತ್ತಾಯ:** ಐಐಎಸ್‌ಸಿಯ ಹಿರಿಯ ವಿಜ್ಞಾನಿ ಟಿ.ವಿ. ರಾಮಚಂದ್ರ ಮಾತನಾಡಿ, ಎತ್ತಿನಹೊಳೆ ಯೋಜನೆಯನ್ನು ಉದಾಹರಿಸಿ, ನದಿ ತಿರುವು ಯೋಜನೆಗಳ ಆರ್ಥಿಕ ಮತ್ತು ಪರಿಸರ ಪರಿಣಾಮಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಬೇಕು ಎಂದು ಹೇಳಿದರು. ಪಶ್ಚಿಮ ಘಟ್ಟಗಳು ಕೋಟ್ಯಂತರ ಜನರ ನೀರಿನ ಅಗತ್ಯ ಪೂರೈಸುವ ಪ್ರಮುಖ ಜಲಮೂಲವಾಗಿವೆ. ಅರಣ್ಯ ನಾಶ ಮತ್ತು ನದಿಗಳ ಸ್ವಾಭಾವಿಕ ಹರಿವಿಗೆ ಅಡ್ಡಿಪಡಿಸುವ ಯೋಜನೆಗಳು ದೀರ್ಘಕಾಲೀನ ಅಪಾಯಗಳಿಗೆ ಕಾರಣವಾಗಬಹುದು ಎಂದು ಎಚ್ಚರಿಸಿದರು.

ನದಿ ತಿರುವು ಯೋಜನೆಗಳ ಬದಲಿಗೆ ಅರಣ್ಯ ಸಂವರ್ಧನೆ, ಕೆರೆಗಳ ಪುನರುಜ್ಜೀವನ, ಮಳೆನೀರು ಕೊಯ್ಲು ಮತ್ತು ಸ್ಥಳೀಯ ಜಲಮೂಲಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಶಿರಸಿ–ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ್ ಮಾತನಾಡಿ, ಯೋಜನೆ ರೂಪಿಸುವ ಮೊದಲು ಸ್ಥಳೀಯರ ಅಭಿಪ್ರಾಯ ಪಡೆಯಬೇಕಿತ್ತು. ಜಿಲ್ಲೆಯಲ್ಲಿ ಈಗಾಗಲೇ ನೀರಿನ ಸಮಸ್ಯೆಯಿರುವ ಸಂದರ್ಭದಲ್ಲಿ ನದಿ ತಿರುವು ಯೋಜನೆಗಳನ್ನು ಮುಂದುವರಿಸುವುದು ಸೂಕ್ತವಲ್ಲ. ಡಿಪಿಆರ್ ಪ್ರಕ್ರಿಯೆ ಸ್ಥಗಿತಗೊಳಿಸಿ, ತಜ್ಞರ ಸಮಿತಿ ರಚಿಸಬೇಕು ಎಂದು ಆಗ್ರಹಿಸಿದರು.

ವಿಧಾನ ಪರಿಷತ್ತಿನ ಮಾಜಿ ಸದಸ್ಯ ಶಾಂತಾರಾಮ ಸಿದ್ದಿ ಮಾತನಾಡಿ, ನದಿಗಳ ಸ್ವಾಭಾವಿಕ ಹರಿವನ್ನು ಬದಲಿಸುವುದರಿಂದ ಉತ್ತರ ಕನ್ನಡದ ನೈಸರ್ಗಿಕ ಸಮತೋಲನಕ್ಕೆ ಧಕ್ಕೆಯಾಗಲಿದೆ. ದಶಕಗಳಿಂದ ಹೋರಾಟ ನಡೆಸುತ್ತಿರುವ ಜನರ ತಾಳ್ಮೆಯನ್ನು ಸರ್ಕಾರ ಪರೀಕ್ಷಿಸಬಾರದು ಎಂದು ಎಚ್ಚರಿಸಿದರು.

**ಯೋಜನೆ ಕೈಬಿಡಲು ಸ್ವರ್ಣವಲ್ಲಿ ಶ್ರೀಗಳ ಆಗ್ರಹ**

ಪ್ರತಿಭಟನೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಸ್ವರ್ಣವಲ್ಲಿ ಮಠದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಸಂದೇಶ ಕಳುಹಿಸಿದ್ದರು. ನದಿ ಪಾತ್ರದಲ್ಲಿ ನೀರಿನ ಲಭ್ಯತೆ ಮತ್ತು ಭವಿಷ್ಯದ ಜಲಕ್ಷಾಮದ ಸಾಧ್ಯತೆಗಳ ಕುರಿತು ವಿಜ್ಞಾನಿಗಳು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರ ಯೋಜನೆಯನ್ನು ಮರುಪರಿಶೀಲಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಬಯಲುಸೀಮೆಯ ಜನರಿಗೆ ನೀರು ಒದಗಿಸುವುದಕ್ಕೆ ವಿರೋಧವಿಲ್ಲ. ಆದರೆ ಪ್ರಸ್ತಾವಿತ ಯೋಜನೆಗಳಿಂದ ಸ್ಥಳೀಯರಿಗೂ ನಿರೀಕ್ಷಿತ ಪ್ರಯೋಜನ ದೊರೆಯದಿದ್ದರೆ, ಪರಿಸರಕ್ಕೆ ಹಾನಿ ಮಾಡುವುದರಲ್ಲಿ ಅರ್ಥವಿಲ್ಲ. ಸರ್ಕಾರ ಉತ್ತರ ಕನ್ನಡದ ಜನರ ಅಹವಾಲುಗಳನ್ನು ಆಲಿಸಬೇಕು ಎಂದು ಸಂದೇಶದಲ್ಲಿ ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕಳುಹಿಸಿದ ಸಂದೇಶದಲ್ಲಿಯೂ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮತೆಯ ಕುರಿತು ತಜ್ಞರಿಂದ ವೈಜ್ಞಾನಿಕ ಅಧ್ಯಯನ ನಡೆಸಬೇಕು. ವರದಿ ಬರುವವರೆಗೆ ಹೊಸ ಪರಿಸರ ಮಾರಕ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದು ಎಂದು ಒತ್ತಾಯಿಸಿದ್ದಾರೆ.

**ಜನಪ್ರತಿನಿಧಿಗಳು ಪಕ್ಷಾತೀತವಾಗಿ ಕೈಜೋಡಿಸಲಿ**

ಪ್ರತಿಭಟನೆಯ ಆಯೋಜಕ ಅನಂತ್ ಹೆಗಡೆ ಅಶೀಸರ ಮಾತನಾಡಿ, ಬೇಡ್ತಿ–ಅಘನಾಶಿನಿ ನದಿಗಳ ಉಳಿವು ಉತ್ತರ ಕನ್ನಡ ಜಿಲ್ಲೆಯ ಅಸ್ತಿತ್ವದ ಪ್ರಶ್ನೆಯಾಗಿದೆ. ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಪಕ್ಷಭೇದ ಮರೆತು ಜನರ ಪರವಾಗಿ ನಿಲ್ಲಬೇಕು. ನದಿ ತಿರುವು ಯೋಜನೆಗಳಿಂದ ಮಲೆನಾಡಿನ ರೈತರು, ಕರಾವಳಿಯ ಮೀನುಗಾರರು ಮತ್ತು ಜೀವವೈವಿಧ್ಯಕ್ಕೆ ಹಾನಿಯಾಗುವ ಆತಂಕವಿದ್ದು, ಸರ್ಕಾರ ಕೂಡಲೇ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿದರು.

ಹಿರಿಯ ಸಾಹಿತಿ ಜಯಂತ್ ಕಾಯ್ಕಿಣಿ, ಪರಿಸರ ಹೋರಾಟಗಾರ ಯಲ್ಲಪ್ಪ ರೆಡ್ಡಿ ಹಾಗೂ ಹಿರಿಯ ಪತ್ರಕರ್ತ ನಾಗೇಶ್ ಹೆಗಡೆ ಕೂಡ ನದಿ ಕಣಿವೆಗಳ ನೈಸರ್ಗಿಕ ಸ್ವರೂಪವನ್ನು ಉಳಿಸುವ ಅಗತ್ಯವನ್ನು ಪ್ರತಿಪಾದಿಸಿದರು.

ಪ್ರತಿಭಟನೆಯಲ್ಲಿ ಸಾವಿರಾರು ಜನರು ಶಿಸ್ತಿನಿಂದ ಪಾಲ್ಗೊಂಡಿದ್ದು, ಪರಿಸರ ಸಂರಕ್ಷಣೆಯ ಘೋಷಣೆಗಳನ್ನು ಮೊಳಗಿಸಿದರು. ಉತ್ತರ ಕನ್ನಡದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಬಿಂಬಿಸುವ ಟೋಪಿ, ಕೋಕಂ ಪಾನೀಯ ಮತ್ತು ಲಘು ಉಪಾಹಾರದ ವ್ಯವಸ್ಥೆಯೂ ಗಮನ ಸೆಳೆಯಿತು. ವಿದ್ಯಾರ್ಥಿಗಳು, ಯುವಜನರು ಹಾಗೂ ಪರಿಸರಾಸಕ್ತರು ಹೋರಾಟಕ್ಕೆ ಬೆಂಬಲ ಸೂಚಿಸಿದರು.

**11 ನಿರ್ಣಯಗಳ ಪ್ರಮುಖ ಅಂಶಗಳು**

- ಪಶ್ಚಿಮ ಘಟ್ಟದ 22 ಪ್ರಮುಖ ನದಿ ಕಣಿವೆಗಳ ಸಂರಕ್ಷಣೆಗೆ ಸರ್ಕಾರ ಸುಸ್ಥಿರ ಯೋಜನೆ ರೂಪಿಸಬೇಕು.
- ಬೇಡ್ತಿ–ಅಘನಾಶಿನಿ ನದಿ ತಿರುವು ಮತ್ತು ನದಿ ಜೋಡಣೆ ಯೋಜನೆಗಳನ್ನು ಕೈಬಿಡಬೇಕು. ಬೇಡ್ತಿ–ವರದಾ ಯೋಜನೆಯ ಡಿಪಿಆರ್ ಪ್ರಕ್ರಿಯೆ ಸ್ಥಗಿತಗೊಳಸಬೇಕು.
- ನದಿ ಪಾತ್ರದ ರೈತರು, ಮೀನುಗಾರರು ಮತ್ತು ಅರಣ್ಯವಾಸಿಗಳ ಬದುಕಿನ ಮೇಲೆ ಉಂಟಾಗುವ ಪರಿಣಾಮಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು.
- ಭೂಕುಸಿತದ ಅಪಾಯ ಮತ್ತು ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮತೆಯನ್ನು ಪರಿಗಣಿಸಬೇಕು.
- ಕರಾವಳಿಯಲ್ಲಿ ಉಪ್ಪುನೀರು ಒಳನುಗ್ಗುವಿಕೆ, ಕೃಷಿ ಮತ್ತು ಮೀನುಗಾರಿಕೆಗೆ ಉಂಟಾಗಬಹುದಾದ ಹಾನಿಯನ್ನು ಪರಿಶೀಲಿಸಬೇಕು.
- ಅರಣ್ಯ, ವನ್ಯಜೀವಿ ಮತ್ತು ಜೀವವೈವಿಧ್ಯ ಸಂರಕ್ಷಣೆಗೆ ಆದ್ಯತೆ ನೀಡಬೇಕು.
- ನದಿ ಕಣಿವೆಗಳ ಸಂರಕ್ಷಣೆ ಮತ್ತು ಸುಸ್ಥಿರ ನೀರಾವರಿಗೆ ಪರ್ಯಾಯ ಯೋಜನೆ ರೂಪಿಸಬೇಕು.
- ವಿಜ್ಞಾನಿಗಳು, ಗ್ರಾಮ ಪಂಚಾಯಿತಿಗಳು, ಸಹಕಾರ ಸಂಘಗಳು ಮತ್ತು ಧಾರ್ಮಿಕ ಮುಖಂಡರ ಅಭಿಪ್ರಾಯಗಳನ್ನು ಪರಿಗಣಿಸಬೇಕು.

Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481 vikramavahini@gmail.com
93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 186,